ಅಪರಂಜಿ

ಸಂಪುಟ ೫
ಮೇ ೧೯೮೮
ಸಂಚಿಕೆ [illegible]

ತಿಳಿನಗೆಯ ಕಾರಂಜಿ



- ಆನಂದ್
- ಕೇಫ
- ಸೂರಿ
- ಕೆ. ಜಿ. ಸತೀಶ್
- ಶಿವಾನಂದ್
- ಎಸ್. ಎನ್. ಶಿವಸ್ವಾಮಿ
- ಎಸ್. ವಿ. ವಿ.
- ಆಮಲಕ
- ಎಚ್. ಎಲ್. ಕೇಶವಮೂರ್ತಿ

ಬಿಡಿಪ್ರತಿ : ಕೇವಲ ಒಂದೂವರೆ ರೂಪಾಯಿ



(ತಿಳಿನಗೆಯ ಕಾರಂಜಿ)

ಸಂಪುಟ ೫ ಮೇ ೧೯೮೮ ಸಂಚಿಕೆ ೮

ಚಂದಾ ವಿವರ :

ಬಿಡಿ ಪ್ರತಿ .
ಒಂದೂವರೆ ರೂಪಾಯಿ

ವಾರ್ಷಿಕ ಚಂದಾ : 15 ರೂ.
ಆಜೀವ ಚಂದಾ 150 ರೂ.
ಪೋಷಕರು 500 ರೂ.

ಗೌರವ ಸಲಹೆಗಾರರು :

ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ

ವಿಳಾಸ :

ಅಪರಂಜಿ ಕಾರ್ಯಾಲಯ
119 [ಹಳೆಯ 36]
6ನೆ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು 560003

ಸಂಪಾದಕ :

ಶಿವಕುಮಾರ್

ತಿಂಗಳ ಹಳೆಯ ಜೋಕು

"ಆಸ್ಪತ್ರೇಲಿ ದೀಪ ಹೋಗಿದೆಯಂತೆ. ಸರಿ ಮಾಡಿ ಬಾ" ಅಂತ ಲೈನ್‌ಮನ್ ಗಿರಿಯನ್ನ ಕಳಿಸಿದರು.

"ನಾನ್ ಹೋಗಾಕಿಲ್ಲ" ಅಂತ ಹಠ ಹಿಡಿದ ಗಿರಿಯ. ಸಾಹೇಬರು "ಯಾಕೋ ಹೋಗುಲ್ಲ ?" ಅಂದದಕ್ಕೆ ಗಿರಿಯ ಹೇಳಿದ.

"ಹೋದ ಬಾರಿ ಅಲ್ಲಿ ಹೋಗಿದ್ದಾಗ. ಹೋದ ಕೂಡ್ಲೆ ಮಾತಾಡುಕ್ಕೆ ಬಿಡದೇ, ಬಟ್ಟೇನೆಲ್ಲಾ ಕಳಚಿ ಮೇಜಿನ ಮೇಲೆ ಮಲಗ್ಸಿ, ಏನಾಗ್ತೈತೆ ಅಂದ್ರು. ಅದ್ಕೇ ನಂಗೆ ಭಯ!"

ಈ ಸಂಚಿಕೆಯಲ್ಲಿ.........

ವ್ಯಂಗ್ಯ ಚಿತ್ರಗಳು : ಬರಗೂರು ಮಾರ್ಕಾಂಡೇಯ, ಚಂದ್ರು

ಮುದ್ರಣ : ಇಂಪ್ರೆಷನ್ಸ್ ಪ್ರಿಂಟರ್ಸ್, ಮಲ್ಲೇಶ್ವರಂ,
ಬೆಂಗಳೂರು-3. ದೂರವಾಣಿ : 363444

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ–೫ ಮೇ ೧೯೮೮ ಸಂಚಿಕೆ–೮

ಉಳಿದವರು ನಿದ್ರಿಸುತ್ತಿರಲು ಯಾವ ಈ ಪುರುಷನು ಕಾಮ ಕಾಮ ಗಳನ್ನು ಸೃಷ್ಟಿಸುತ್ತಾ ಎದ್ದಿರುವನೋ......

—ಕಠ

ಆ ಪುರುಷನು ತೈಜಸ. ಸ್ವಪ್ನಾವಸ್ಥೆಯಲ್ಲಿ ಆತ್ಮನನ್ನು ತೈಜಸ ಎನ್ನುತ್ತಾರೆ. ಏಕೆಂದರೆ ಮುಚ್ಚಿದ ಕಣ್ಣಿನ್ನುಳ್ಳಾಗಲೂ ಅವನು ಬೆಳಕನ್ನು ಸೃಷ್ಟಿಸಿ ಅಲ್ಲಿ ಎಚ್ಚರದ ವ್ಯಾಪಾರಗಳನ್ನು ನಡೆಸುತ್ತಾನೆ.

ನಾವೋ, ಈ ಲೋಕದಲ್ಲಿ, ಪ್ರಜಾಪ್ರಭುತ್ವದಲ್ಲಿ, Cogs in the machine ಆಗಿದ್ದೇವೆ. ನಮಗೆ ಏನೂ ಗೊತ್ತಿಲ್ಲ. ವಿದ್ಯುತ್ತಿಲ್ಲ, ನೀರಿಲ್ಲ, ಒಳ್ಳೆಯ ಗಾಳಿಯಿಲ್ಲ, ಸರಿಯಾದ ಉದ್ಯೋಗವಿಲ್ಲ. ಕೂಗಲು ತ್ರಾಣವಿಲ್ಲ: ಇದೆಯೆಂದಿಟ್ಟುಕೊಂಡರೂ ಕೂಗನ್ನು ಕೇಳುವವರಿಲ್ಲ. ಆದರೆ ನಾವು ಸರ್ವತಂತ್ರ ಸ್ವತಂತ್ರ ಸಾರ್ವಭೌಮ ಪ್ರಜೆಗಳೆಂಬ ಅಮಲಿನಿಂದ ನಿದ್ರಿಸುತ್ತಿದ್ದೇವೆ.

ನಮ್ಮ ಈ ನಿದ್ದೆಯ ಲಾಭವನ್ನು ಪಡೆದು, ಈ ಪುರುಷನು,(ರು). ಚೆನ್ನಾಗಿ ಎಚ್ಚೆತ್ತುಕೊಂಡಿದ್ದು ಮಾಡಬಾರದ್ದನ್ನೆಲ್ಲಾ ಮಾಡಿ, ತನ್ನ (ಎಂದರೆ ಅವನು(ರು) ಹೇಳುವಂತೆ–'ನಮ್ಮ') ಕಾಮ ಕಾಮಗಳನ್ನು ಸೃಷ್ಟಿಸಿ ಅವನ್ನು ಅನುಭವಿಸುತ್ತಾನೆ(ರೆ). ಯಥೇಷ್ಟವಾದ ಕಾಮಚಾರವನ್ನು ತನ್ನ ವಲಯದ ಪರಿಧಿ ಯಲ್ಲಿ ಅನುಭವಿಸುತ್ತಿದ್ದಾನೆ(ರೆ).

ನಾವು ಮಾತ್ರ ಸ್ವಪ್ನದಲ್ಲಲ್ಲದೆ ಇನ್ನೆಲ್ಲೂ ಕಾಮಚಾರವನ್ನು ಹೊಂದಿಲ್ಲ.

(ಕಾಮಚಾರ= ಬಯಸಿದುದನ್ನು ಪಡೆಯಬಲ್ಲ ಶಕ್ತಿ.)

ಅಪರಂಜಿ ಕಿಡಿ

—ಆನಂದ್

ದಿನಪತ್ರಿಕೆಗಳಲ್ಲಿ ಇನ್ನು ಮುಂದೆ "ಮುಷ್ಕರಗಳು" ಅಂತ ಒಂದು ವಿಭಾಗ ಇದ್ದರೆ ಓದುಗರಿಗೆ ಅನುಕೂಲ !

* * * *

ಆಟೋ ಮುಷ್ಕರ ಅಂತ್ಯವಾದ ಕೂಡಲೇ ವೈದ್ಯರೆಲ್ಲ ಸಂತೋಷಪಟ್ಟರಂತೆ!

* * * *

ಮೊನ್ನೆ ಸ್ನೇಹಿತನಿಗೆ ಫೋನ್ ಮಾಡಿದ ಕೂಡಲೆ ಸರಿಯಾದ ನಂಬರ್ ಸಿಕ್ಕಿ, ತಬ್ಬಿಬ್ಬಾದೆ, ಮಾತೇ ಹೊರಡಲಿಲ್ಲ ಅಂತ ನಮ್ಮ ಬಳಗದವರು ಬರೆದಿದ್ದಾರೆ !

* * * *

ಕಂಡಕ್ಟರ್‌ಗಳು ಮನುಷ್ಯರಾಗಲಿ.

—'ವಾಚಕರ ವಾಣಿ'

ಅದಕ್ಕಿಂತ ಮನುಷ್ಯರನ್ನೇ ಕಂಡಕ್ಟರ್ ಆಗಿ ನೇಮಿಸುವುದು ಸುಲಭ.

* * * *

ದೂರ ಸಂವೇದಿ ಉಪಗ್ರಹದ ಕ್ಯಾಮೆರಾಗಳಿಗೆ ಕರ್ನಾಟಕದ ಮೇಲೆ ಯಾವ ಮೋಡಗಳು ಕಾಣುತ್ತಿವೆಯೋ ?

* * * *

ನಾನು ಗಂಡಸರನ್ನು ಯಾವತ್ತೂ ಅರ್ಥ ಮಾಡಿಕೊಂಡಿಲ್ಲ.

—ಶ್ರೀಮತಿ ಮಾರ್ಗರೆಟ್ ಥ್ಯಾಚರ್

ಅನರ್ಥವಾದ ಮಾತು !

* * * *

ತಾಜ್ ಮಹಲ್ ಶುಭ್ರಗೊಳಿಸಲು ತಜ್ಞರ ಸಮಿತಿ ನೇಮಿಸುತ್ತಾರಂತೆ.

—ಸುದ್ದಿ


ಸುದ್ದಿ ಕೇಳಿ ಷಹಜಹಾನ್ ನಡುಗಿದನಂತೆ !

* * * *

ಕನ್ನಡದ ಬಗ್ಗೆ ಸಂಶೋಧನೆ ಮಾಡುವವರೇ ಇಲ್ಲ.

—ಪತ್ರಿಕೆ

ಇವರಿಗಾಗಿಯೋ ಸಂಶೋಧನೆ ಮಾಡುತ್ತಾರೆ ಎನ್ನುವುದು ಶುದ್ಧ ಕುಹಕ !



ಹೊಸಾ ಹಾಡು "ಬೋಫೋರ್ಸ್ ಮಂಗಳ" ಸರಿಯಾಗಿ ಕಲಿ !
ಏನನ್ನಾದರೂ ಪರ್ಮನೆಂಟಾಗಿ ಮುಕ್ತಾಯ ಮಾಡಬಹುದು.

6

ಯಾತ್ರಿಕರ ಪತ್ರ

—"ಶೇಷ"

ಚಟ್ನಳ್ಳಿ ಬಿಟ್ಟು ಯಟ್ನಳ್ಳಿ ಸೇರಿದ್ದಾಯ್ತು. ಯಟ್ನಳ್ಳಿ–ಹೆಸರಿನಿಂದಲೇ–ರಾಜನಿಗಾಗಲೀ ಚಂದಿಗಾಗಲೀ ನನಗಾಗಲೀ ಅಷ್ಟಾಗಿ ಹುಮ್ಮಸ್ಸು ಬರಲಿಲ್ಲ. ಯಟ್ನಳ್ಳಿ–ಕಲ್ಲು ನಾಮಫಲಕಾನ ಹಾಯ್ದು ಮುಂದೆ ನಮ್ಮ ಸೈಕಲ್‌ಗಳನ್ನು ತುಳಿಯುಕ್ಕೆ ಶುರು ಮಾಡಿದೆವು. ನಮ್ಮ ಮುಂದೆ ಸುಮಾರು ಇಪ್ಪತ್ತು ಇಪ್ಪತ್ತೈದು ಮಂದಿಯ ತಂಡ ನಮ್ಮನ್ನು ತಡೆದು ಸೈಕಲ್ಲಿಂದ ಇಳಿಸಿತು.

"ಯಟ್ನಳ್ಳೀಗೆ ಬರಾಕಿಲ್ವಾ ?" ಅಂತ ಒಬ್ಬಾತ ಕೇಳಿದ.

"ಏನಲ್ಲಿ ?" ರಾಜ ಕೇಳಿದ.

"ಅಲ್ಲಿಂದ್ಲೇ ನಾವು ಓಡೋದು– ಚಟ್ನಳ್ಳಿ ಜನ, ಮಟ್ನಳ್ಳಿ ಜನ, ಜಟ್ನಳ್ಳಿ ಜನ, ತಟ್ನಳ್ಳಿ ಜನ, ಕುಟ್ನಳ್ಳಿ ಜನ ಎಲ್ರೂ ಇವತ್ತು ಯಟ್ನಳ್ಳೀಲೇ ಸೇರೋದೂ–ಅದೇ ನಮ್ಮ ಪಂಚಾಯ್ತಿ ಇರೋ ಊರು ಅಂದ ಮತ್ತೊಬ್ಬ ?ಟ್ನಳ್ಳಿ ಆತ.

"ಚಟ್ನಳ್ಳೀಲಿ ಸಂತೆಗೆ ಹೋಗಿದ್ವಿ–ಅಲ್ಲಿ ಪಂಚಾಯ್ತಿ ಇಲ್ವಾ?" ಚಂದಿ ಕೇಳಿದ.

"ಇಲ್ರಿ, ಅಲ್ಲಿ ಸಂತೆ ಒಂದೇ ನಡೆಯೋದು. ಅಲ್ಲಿ ನಮ್ಮ ಪಟೇಲ್ರವ್ರೆ."

"ಯಟ್ನಳ್ಳೀಲಿ ಯಾಕೆ ಓಡ್ತೀರಿವತ್ತು?" ಕೇಳಿದೆ.

"ಅಲ್ಲೇ ಪಂಚಾಯ್ತೀಲಿ ಟಿ. ವಿ. ಇರೋದು. ಅದರಾಗೆ ಅದ್ಯಾರೋ ಆಯಮ್ಮ...

"ಸಬ್ನಾಜ್ಮಿ– ಒಬ್ಬ ಸ್ಟೂಡೆಂಡ್ ಸಹಾಯ ಮಾಡಿದ.

"ಹೂ–ಅದೇ ಆಕೀ ಕೈಲಿ ರಾಜೀವ್ ಗಾಂಧಿಯೋರು ಆರ್ಡರ್ ಮಾಡೌರೆ. ನಮ್ಮ ದೇಸಕೋಸ್ರ ಎಲ್ರೂ ಓಡ್ಬೇಕು ಅಂತ–ಅಂಗೇ ನಮಗೆ ರಾಚಪ್ಪ ಹೇಳ್ಕಳ್ಸಿರೋದು—"

"ರಾಚಪ್ಪ ಯಾರು ?"

"ಮಟ್ನಳ್ಳಿ ಪಂಚಾಯ್ತಿ ಅದ್ಯಕ್ಸರು"

"ಇಂಥಾ ಜನರಿರೋ ತನಕ ರಾಜೀವ್ ಗಾಂಧಿ ಸೇಫ್ ಕಣ್ರಿಯ್ಯಾ ಅಂದ ರಾಜ.

ಚಟ್ನಳ್ಳಿ, ಯಟ್ನಳ್ಳಿ, ಮಟ್ನಳ್ಳಿ, ಜಟ್ನಳ್ಳಿ, ತಟ್ನಳ್ಳಿ–ಕುಟ್ನಳ್ಳಿಗಳು ಒಂದೇ ಗ್ಯಾಂಗ್ ಹಳ್ಳಿಗಳು. ಚಟ್ನಳ್ಳಿ–ಸಂತ ಸೆಂಟರ್ರು ಮತ್ತು ಪೋಲಿಸ್ ಔಟ್‌ಪೋಸ್ಟು ಮಟ್ನಳ್ಳಿ–ಪಂಚಾಯ್ತಿ ಎಚ್. ಕ್ಯೂ, ಜಟ್ನಳ್ಳೀಲಿ ಜನರ ಆಸ್ಪತ್ರೆ, ಮಟ್ನಳ್ಳೀಲಿ ದನದ ಆಸ್ಪತ್ರೆ, ತಟ್ನಳ್ಳೀಲಿ ಹೈಸ್ಕೂಲ್‌ವರ್‍ಗು ಸಾಲೆ, ಕುಟ್ನಳ್ಳೀಲಿ ವಾಲಗದ ಕೆಂಪಣ್ಣನ ವಾಸ. ಇವು ಈ ಹಳ್ಳಿಗಳ ಆಡಳಿತ ವ್ಯವಸ್ಥೆ. ಇವೆಲ್ಲವನ್ನೂ ನಮ್ಮ ಸಬ್ನಾಜ್ಮಿ ಅಭಿಮಾನಿಯಿಂದ ಚಂದಿ ತಿಳಿದುಕೊಂಡಿದ್ದ.

ಯಟ್ನಳ್ಳಿ ಪಂಚಾಯ್ತಿ ಮನೆ ಮುಂದೆ "ಭಾರತದ ಸ್ವಾತಂತ್ರ–ನಲವತ್ತು"ರ ಓಟದ ಕಾರ್ಯಕ್ರಮ ಏರ್ಪಾಟಾಗಿತ್ತು. ಚಟ್ನಳ್ಳಿ ಜಟ್ನಳ್ಳಿ–ಸ್ಸಾರಿ–ಎಲ್ಲಾ ಟ್ನಳ್ಳಿ ಜನರೂ ಯಟ್ನಳ್ಳೀಲಿ ಜಮಾಯಿಸಿದ್ದರು. ಒಂದೊಂದು ಟ್ನಳ್ಳಿ ಗುಂಪೂ ಬೇರೆ ಬೇರೆ ಸಾಲುಗಳನ್ನು ಮಾಡಿಕೊಂಡಿದ್ದರು. ಪಂಚಾಯ್ತಿ ಅದ್ಯಕ್ಷ ರಾಚಪ್ಪನ ವಿಶೇಷ ಆಹ್ವಾನದ ಮೇಲೆ ರಾಜ ಚಂದಿ ನಾನು–ಯಟ್ನಳ್ಳಿ ತಂಡದಲ್ಲಿ ಸೇರಿಕೊಂಡೆವು. ಸಮಾರಂಭ–ಕುಟ್ನಳ್ಳಿ ಕೆಂಪಣ್ಣನವಾಲಗದಿಂದ ಶುರುವಾಯ್ತು. ಚಟ್ನಳ್ಳಿ ಪಟೇಲ್ ರವಳಪ್ಪನಿಂದ ಆ ದಿನದ ಮಾತ್ವ ಕುರಿತು ಕಿರು ಭಾಷಣ–

"ಜಟ್ನಳ್ಳಿ ಮಟ್ನಳ್ಳಿ ಯಟ್ನಳ್ಳಿ ತಟ್ನಳ್ಳಿ ಕುಟ್ನಳ್ಳಿ ಮತ್ತು ನನ್ನ ಊರಾದ ಚಟ್ನಳ್ಳಿ ಜನಗಳೇ" (ಕರತಾಡನ)–ಇ ದಿನ ನಾವೆಲ್ಲಾ ಇಲ್ಲಿ ನಮ್ಮ ವೇಸಕ್ಕಾಗಿ ಸೇರಿದ್ದೇವೆ. ಯಾಕೆ ? ಓಡಾಕೆ. ನಮ್ಮ ದೇಸಕ್ಕಾಗಿ ಇದುವರ್‍ಗೂ ಎಷ್ಟೋ ಜನ ಸತ್ತವ್ರೆ. ಆದ್ರೆ ಎಷ್ಟು ಜನ ಓಡವ್ರೆ ?"

"ಪಿ. ಟಿ. ಉಸಾ ! ಪಿ. ಟಿ. ಉಸಾ !" ಅಂತ ಕೂಗು.

"ಹೌದ್ರ– ಆಯಮ್ಮ ಪಿ. ಟಿ. ಉಸಾ ಓಡ್ತಾಳೆ. ಅದಕ್ಕೇ ನಾವೆಲ್ರೂ ಅವಳಂಗೇ ಓಡ್ಬೇಕೂಂತ ನಮ್ಮ ಪ್ರಧಾನಿಯೋರಿಗೆ ಆಸೆ. ಹಿಂದೆ ಅಫ್ರಿಕಾದಲ್ಲಿ

ಹೊಟ್ಟೆಗಿಲ್ದೆ ಜನ್ನಸಾಯ್ತಿದ್ರೂಂತ– ನಮ್ಮನೆಲ್ಲಾ ಓಡೂ ಅಂದಿದ್ರು–ನಿಮಗೆಲ್ಲಾ ಗೆಪ್ತಿ ಇರ್ಬ್ಯೋದು. ಈಗ ನಮ್ಮ ಭಾರತದ ಜನ– ಪಂಜಾಬ್‌ನಾಗೆ– ಅಸ್ಸಾಂನಾಗೆ– ಇನ್ನೂ ಎಲ್ಲೆಲ್ಲೋ ಸಾಯ್ತಿದ್ದಾರೇಂತ– ನಮ್ಮನ್ನ ಓಡೀಂತ ರಾಜೀವ್ ಗಾಂಧಿ ಯೋರು ಆರ್ಡರ್ ಮಾಡೌರೆ. ನಮ್ಮ ದೇಸಕ್ಕೆ ಸ್ವಾತಂತ್ರ ಬಂದು ನಲವತ್ತು ವರ್ಸದ ಮ್ಯಾಲೂ ನಮ್ಮ ಜನ ಸಾಯ್ತಿದ್ರೆ–ನಾವೆಲ್ಲಾ–ಬದುಕಿರೋರು ಓಡ್ಲೇ ಬೇಕು–ಅದ್ರಿಂದ ನಾವೂ ಉದ್ದಾರಾಗ್ತೀವಿ ದೇಸ್ವೂ ಉದಾರ್ವಾಗತ್ತೆ. ನೀವು ಈಗ ನಿಮ್ಮ ಕೈಲಾದಷ್ಟು– ಅತ್ವಾ ಕಾಲ್ಗಾದಷ್ಟು ಓಡಿ–ದೇಸಕ್ಕೆ ನಿಮ ರುಣ ತೀರ್ಸಿ.


ಪ್ರಚಂಡ ಕರತಾಡನ.

ಜಟ್ನಳ್ಳಿ ಪೋಲೀಸ್ ದಫೇದಾರ–ತನ್ನ ಶೀಟಿಯನ್ನು ಪಂಚಾಯ್ತಿ ಅಧ್ಯಕ್ಷ ರಾಜಪ್ಪನ ಕೈಗೆ ಕೊಟ್ಟ. ರಾಜಪ್ಪ ಶೀಟಿ ಊದಿದ: ನಾವೆಲ್ಲಾ ಓಡಿದೆವು–ನಮ್ಮ ದೇಶಕ್ಕಾಗಿ.

ಮುಟ್ನಳ್ಳಿ ಗ್ರೂಪ್–ಒಂದು ಫರ್ಲಾಂಗ್ ಓಡಿ–ಮಾಯವಾದರು. ಇನ್ನು ಅರ್ಧ ಫರ್ಲಾಂಗ್‌ನಲ್ಲಿ ತಟ್ನಳ್ಳಿಗ್ರೂಪ್ ಮಾಯವಾದರು. ನಾನು ರಾಜ ಚಂದಿ–ಯಟ್ನಳ್ಳಿಗೆ ವಾಪಸ್ ಓಡಿ–ನಮ್ಮ ಸೈಕಲ್‌ಗಳನ್ನ ಪಡೆದು–ತಲಕಾಡು ದಾರಿ ಹಿಡಿದೆವು.

ಅರವಾ ಮೊದ್ದುವಿಗೆ ಅನುಮಾನ ಬಂತು ಮಲಗಿದ್ದಾಗ, ಸ್ವಿಚ್‌ನ ಆಫ್ ಮಾಡಿದ್ದೆನೋ ಇಲ್ಲವೋ ಅಂತ. ಬೆಂಕಿ ಕಡ್ಡಿ ಗೀರಿ ಸ್ವಿಚ್‌ನ ನೋಡಿ ಬಂದು ಮಲಗಿಕೊಂಡ.

—ಈ ನಗೆ ಹನೀನ ಈಗಿನ ಯದ್ವಾ ತದ್ವಾ ಪವರ್ ಕಟ್‌ಗೆ ಮುಂಚೆ ಮಾಡಿದ್ದು ಅಂತ ತಕ್ಷಣಾನೇ ತಿಳಿಯುತ್ತೆ ಅಲ್ವೇ ?



"ಮಂಡಲ್ ಪಂಚಾಯ್ತಿ ಚುನಾವಣೇಲಿ ಮಚ್ಚಿನ ಗುರ್ತಿನ ಮೇಲೆ ಗೆದ್ದಿದೀನಿ
ಜ್ಞಾಪಕ ಇರ್ಲಿ !"

10

ಬರಲಿರುವ ಜಾಹೀರಾತುಗಳು

—ಆನಂದ್

'ಗ ಲ ಭೆ !!'

ಅರ್ಧ ಗಂಟೆಯೊಳಗೆ, ನಗರದ ಯಾವ ಪ್ರದೇಶದಲ್ಲಾದರೂ ಸಣ್ಣ ಅಥವಾ ಭಾರೀ ಪ್ರಮಾಣದ ಗಲಭೆಗಳನ್ನು ಏರ್ಪಡಿಸುತ್ತೇವೆ. ಗಲಭೆಯ ನಂತರ ಪತ್ರಿಕೆಗಳಲ್ಲಿ ಲೇಖನ ಬರೆಸಲು ಸಿಬ್ಬಂದಿ ಇದ್ದಾರೆ. ಪೋಲೀಸರ ದೌರ್ಜನ್ಯದ ಖಂಡನೆ ಇತ್ಯಾದಿ ಭಾಷಣಗಳನ್ನು ಏರ್ಪಡಿಸಲಾಗುತ್ತೆ. (ಮೂರು ಗಲಭೆ ಆರ್ಡರ್ ಮಾಡಿದರೆ ಒಂದು ಭಾಷಣ ಉಚಿತ !)

*　　　*　　　*　　　*

'ಧರಣಿ !'

ಯಾವ ಕಾರಣಕ್ಕಾಗಿ ಬೇಕಾದರೂ ಧರಣಿ ಮಾಡಲು ನೀವೇ ಕಷ್ಟಪಡಬೇಡಿ ! ನಮ್ಮಲ್ಲಿ ವಿಶೇಷವಾಗಿ ತರಬೇತಿ ಹೊಂದಿದ ವ್ಯಕ್ತಿಗಳ ಮೂಲಕ ಸುಸಜ್ಜಿತ ಧರಣಿ ಮಾಡಲು ಅನುಕೂಲಗಳಿವೆ. ಶಾಮಿಯಾನ, ಪ್ಲಕಾರ್ಡ್ ಇತ್ಯಾದಿ ನಾವೇ ತಂದು ನಿಮ್ಮ ಹಾಗೂ ಅಭಿಮಾನಿಗಳ ಮನ ತಣಿಯುವಂತೆ ಧರಣಿ ನಡೆಸುತ್ತೇವೆ. ಸದ್ಯಕ್ಕೆ ತಮಿಳು, ಕನ್ನಡ ಹಾಗೂ ಇಂಗ್ಲಿಷ್ ಸೌಲಭ್ಯಗಳುಂಟು !

*　　　*　　　*

'ಜನ ಸಮೂಹ'

ರಾಜಕಾರಣಿಗಳು ಲಾರಿಗಳಲ್ಲಿ ಕುರಿಮಂದೆಗಳಂತೆ ಜನರನ್ನು ತಂದು ಸಂತೋಷಪಡುವುದನ್ನು ನೋಡಿ ನೀವು ರೇಗಿದ್ದೀರಾ? ಹಾಗಾದರೆ ನಮ್ಮ ಏಜೆಂಟರನ್ನು ಸಂಪರ್ಕಿಸಿ ! ಯಾವುದೇ

ಸಮಾರಂಭವಾಗಲಿ, ಎಷ್ಟೇ ಬೋರ್ ಹೊಡೆವ ಭಾಷಣಕಾರ ರಿರಲಿ, ನಮ್ಮ ಸ್ವಯಂ ಸೇವಕರ ಸೇನೆ ಎರಡು ಗಂಟೆಗಳ ನೋಟೀಸಿನಲ್ಲಿ ಸಿದ್ಧ ! ಕೃತಕ ಗುಂಪು ಎಂದು ಯಾರಿಗೂ ಸುಳಿವೇ ಸಿಕ್ಕದಂತೆ ನೂರಾರು, ಸಾವಿರಾರು ಜನರನ್ನು ಬರ ಮಾಡಬಲ್ಲೆವು !

*　　*　　*　　*

'ಕಾಲೇಜು ಸೀಟುಗಳು !'

ನಿಮ್ಮ ಕಾಲೇಜು ಸೀಟುಗಳ ಅಗತ್ಯಕ್ಕೆ ನಮ್ಮನ್ನು ಸಂಪರ್ಕಿಸಿ. ಅಲ್ಲಿ ಇಲ್ಲಿ ಪರದಾಡಬೇಡಿ. ಯಾವ ರಾಜ್ಯದಲ್ಲಿ, ಯಾವ ಕಾಲೇಜು ಸೀಟು ಬೇಕೆಂದು ತಿಳಿಸಿ, ಶಾಂತರಾಗಿ ಮನೆಯಲ್ಲಿ ಕುಳಿತಿರಿ ! ಹದಿನೈದು ವರ್ಷಗಳಿಂದ ಅನುಭವವುಳ್ಳ ಸೀಟು–ಪಕ್ಷಿಗಳು ನಮ್ಮಲ್ಲಿದ್ದಾರೆ !

*　　*　　*　　*

'ಪ್ರಮಾಣ ಪತ್ರಗಳು'

ಯಾವುದೇ ಕೆಲಸವಾಗಬೇಕಾದರೂ ಸೂಕ್ತ ಪ್ರಮಾಣ ಪತ್ರಗಳ ಅಗತ್ಯ ಇದ್ದೇ ಇರುತ್ತದೆ. ಇವರ ಕೊರತೆಯಿಂದಾಗಿ ಚಿಂತಿಸುತ್ತ ಕೂರಬೇಡಿ ! ನಮ್ಮ ಆಧುನಿಕ ಆಫೀಸ್ ಹಾಗೂ ಕಾರ್ಯಾಗಾರಕ್ಕೆ ಭೇಟಿ ಕೊಡಿ ! ಯಾವ ವರ್ಷದ್ದಾದರೂ ಪ್ರಮಾಣ ಪತ್ರಗಳನ್ನು ಹೊಂದಿಸಿಕೊಡುತ್ತೇವೆ. ಜಮೀನು ವ್ಯವಹಾರ ಮೊದಲಾಗಿ, ಸ್ಕೂಲ್ ಸರ್ಟಿಫಿಕೇಟುಗಳವರೆಗೆ ಎಲ್ಲ ತರಹ ಪತ್ರಗಳನ್ನು ನಿಯೋಜಿಸಬಲ್ಲೆವು !

ನೀರು ಕುಡಿಸಿದರು

—ಸೂರಿ

"ಜನಗಳಿಗೆ ಒಳ್ಳೆ ಕುಡಿಯೋ ನೀರನ್ನ ಸಪ್ಲೈ ಮಾಡಬೇಕೂ ಅನ್ನೋ ಮಾತನ್ನ ನಾನೂ ಒಪ್ಕೋತೇನೆ. ಆದ್ರೆ ಹಾಲಿ ಇರೋ ಪರಿಸ್ಥಿತೀಲಿ ಅದು ಎಷ್ಟರ ಮಟ್ಟಿಗೆ ಸಾಧ್ಯಾ ಅನ್ನೋದನ್ನ ನೀವು ಯೋಚಿಸಿದ ಹಾಗೆ ಕಾಣಲಿಲ್ಲ..,ಇಲ್ಲಿ ನೋಡಿ, ನಮ್ಮೂರಿನ ಈ ಪೈಪ್ ಲೈನುಗಳೂ ಅಂತ ಇವೆಯಲ್ಲ ಅವೆಲ್ಲ ನಮ್ಮ ತಾತನ ಕಾಲದಲ್ಲಿ ಹಾಕಿರೋ ಅಂಥಾವು. ಎಲ್ಲಾ rust ಹಿಡಕೊಂಡು ಎಲ್ಲಂದ್ರಲ್ಲಿ ಅಂತ ಒಂದು ಸಾವಿರ ಕಡೆ ತೂತುಗಳು. ಸಾಲದಕ್ಕೆ ಪಕ್ಕದಲ್ಲೇ sewage pipe lineಗಳು. ಅವನ್ನೆಲ್ಲಾ ತೆಗೆದು ಸರೀ ಮಾಡಬೇಕೂ ಅಂತ ಅಂದ್ರೆ... ನಾನೂ ನೀವೂ ಇನ್ನಾ ನಾಕು ಸಾರಿ ಹುಟ್ಟಿ ಬಂದ್ರೂ ಆಗದೇ ಇರೋ ಅಂಥಾ ಕೆಲಸ, ಮಿಸ್ಟರ್ ಸುಂದರ್"

"ಆ ಪೈಪು ಲೈನುಗಳ ಕಥೆ ಹಾಗಿರ್ಲಿ ಸಾರ್. ಆದರೆ ನಮ್ಮ water supply sourceನಲ್ಲೇ ಆಗ್ತಾ ಇರೋ pollutionನಾದ್ರೂ at least ತಡಿಯಕ್ಕೆ ಆಗಲ್ಲವಾ ಸಾರ್ ? ಆ ನಾಯಕನ ಪಾಳ್ಯದ ಎಲ್ಲಾ ಮನೆಗಳ ಬಚ್ಚಲ ನೀರೂ ನಮ್ಮ lake ಗೆ tributaries. ಇನ್ನ ಆ ಊರು ಮುಖಂಡರೂ ಅನ್ನಿಸ್ಕೊಳ್ಳೋರ ಟ್ರಾಕ್ಟರುಗಳು, ಗೊಬ್ಬರದ ಟ್ರೇಲರ್‌ಗಳು ಇವನ್ನೆಲ್ಲಾ ತೊಳೆಯಕ್ಕೆ ಅದೇ ಪ್ರಶಸ್ತವಾದ ಜಾಗ—ಇವನ್ನಾದ್ರೂ ನಿಲ್ಲಿಸೊಕ್ಕೆ ಆಗೊಲ್ಲವಾ ಸಾರ್ ನಿಮ್ಮ ಕೈನಲ್ಲಿ ?"

"ಇಲ್ಲಿ ನೋಡಿ, ನಾನೂ ಸರ್ವಿಸ್‌ಗೆ ಸೇರಿದ ಹೊಸದ್ರಲ್ಲಿ ನಿಮ್ಮ ಥರಾನೇ ಇದ್ದೆ. ಬಿಸೀ ರಕ್ತ, ಹಸೀ ತಲೆ—ಆ ಹಳ್ಳೀ ಪುಡಾರಿಗಳಿಗೆಲ್ಲ notice ಕೊಟ್ಟೆ, prosecute ಮಾಡಿಸ್ತೀನಿ ಅಂತ—ಅವತ್ತು ಸಂಜೇನೆ ನೋಡಿ ಅವರೆಲ್ಲಾ ಸೇರಿಕೊಂಡು ನನ್ನನ್ನ ಉಟ್ಟ ಬಟ್ಟೇಲೆ ಇಲ್ಲಿಂದ ಎತ್ತಿ ಒಂದು ಹಾಳು ಕೊಂಪೆಗೆ ಒಗೆಸಿದ್ರು, ಎರಡು ವರ್ಷಾ ನನ್ನ ಮಿಸಸ್‌ಗೆ ಖಾಯಿಲೆ, ಮಕ್ಕಳಿಗೆ ಓದು ಬರಹಕ್ಕೆ ತೊಂದರೆ ಅಂತೆಲ್ಲಾ ಅನುಭವಿಸಿ ಕೊನೆಗೆ ಅವರುಗಳ ಕಾಲಿಗೇ ಬಿದ್ದು, ಈ ಊರಿಗೆ ಮತ್ತೆ post ಮಾಡಿಸ್ಕೊಂಡಿದ್ದಾಯಿತು—ಈಗ ನಿಂ ಮಾತನ್ನ ಕೇಳಿಕೊಂಡು ಅವರನ್ನ ಮತ್ತೆ ಎದುರು ಹಾಕಿಕೋ ಬೇಕೂ ಅಂತೀರ ? Impossible—Once bitten, twice, shy ”

ದೊಡ್ಡ ಸಾಹೇಬರ ಜತೆಗೆ ಇನ್ನು ಇಪ್ರು ಬಗ್ಗೆ ಮಾತನಾಡೋದ್ರಲ್ಲಿ ಅರ್ಥ ಇಲ್ಲ ಅಂತ ಸುಂದ್ರೂಗೆ ತಿಳೀತು. ಹುಂ, what cannot be cured must be endured ಅಂತ ಅಂದ್ಕೊಂಡು ಅಲ್ಲಿಂದ ಜಾಗಾ ಖಾಲಿ ಮಾಡಿದ. ಆದ್ರೆ ಆ what cannot be cured ಅನ್ನೋದ್ರು ಪಟ್ಟೀನಲ್ಲಿ ಈ ಬೇಸಿಗೇಲಿ ಬರಬಹುದಾಗಿರೋ jaundice ಉ gastro enteritis ಕೂಡ ಇರಬಹುದೂ ಅನ್ನೋ ಹೆದರಿಕೆ ಬರದೇ ಹೋಗಲಿಲ್ಲ.

ಇದಾಗಿ ಸುಮಾರು ಒಂದು ತಿಂಗಳಾಗಿರಬಹುದೂ ಅಂತೀನಿ. ಆಳೋ ಪಕ್ಷ ದಲ್ಲಿ ಭಿನ್ನಮತೀಯರು, ಖಿನ್ನ ಮತೀಯರು ಅನ್ನೋರ ಕಾಟಾ ತಡೀಲಾರದೆ ಮುಖ್ಯಮಂತ್ರಿಗಳು cabinetನ expand ಮಾಡಬೇಕಾಗಿ ಬಂತು.ಗೋವಿಂದಾ ಅಂತ ಅಂದ್ಕೊಂಡು ಆ ಗುಂಪಿನಲ್ಲಿ ಒಳಗೆ ಬಂದೋರಲ್ಲಿ ಸುಬ್ಬಯ್ಯನವರೂ ಒಬ್ರು. ಸುಂದ್ರೂಗೆ ಜಾತಿ ಬಂಧುಗಳು, ಹಾಗೆ ನೋಡಿದ್ರು ದೂರದ ಸಂಬಂಧಿಗಳೂ ಕೂಡ.

ಆದ್ರೆ, ಸುಂದ್ರೂಗೆ ಸಂತೋಷವಾಗಿದ್ದು ಈ ಯಾವುದಕ್ಕೂ ಅಲ್ಲದೆ, ಅವನ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟ ರಾಜ್ಯ ಮಂತ್ರಿಗಳು ಅವರೇ ಅನ್ನೊ ಒಂದು ಕಾರಣದಿಂದ್ಲೇ. ಒಂದು ಸ್ವಲ್ಪ ಪ್ರಯತ್ನ ಪಟ್ಟರೆ ಈಗಲಾದರೂ lakeಗೆ ಆಗ್ತಾ ಇರೋ pollutionಅನ್ನ ನಿಲ್ಲಿಸಬಹುದಲ್ಲಾ ಅನ್ನಿಸ್ತು.

ಸುಬ್ಬಯ್ಯನವರು ಚಾರ್ಜ್ ತಗೊಂಡು ಒಂದು ಹದಿನೈದು ದಿನಾ ಅಂತ ಆದ ಮೇಲೆ ಒಂದು ಭಾನುವಾರ ಸಾಯಂಕಾಲ ಅವರ ಮನೆಗೆ ಹೋದ ಸುಂದ್ರೂ. ಅವ್ರು lawnನಲ್ಲಿ ಆರಾಮವಾಗಿ ಬಾಟ್ಲು ಹಾಕ್ತಾ ಕೂತಿದ್ರು. ನೋಡಿದ್ರೆ ಈ ಲೋಕದಲ್ಲಿ ಇದ್ದ ಹಾಗೆ ಕಾಣಲಿಲ್ಲ. ಬಂದ ಕೆಲಸ ಆಗೋ ಹಾಗೆ ಕಾಣಲ್ಲ ಅನ್ನಿಸ್ತು. ಆದ್ರೂಸೂವೆ ಒಂದು ಕೈ ನೋಡೇ ಬಿಡೋಣ ಅಂತ ಅನ್ಕೊಂಡು.

"ನಾನು ನಿಮ್ಮ ಜನಾನೇ ಸಾರ್. ವಾಟರ್ ಸಪ್ಲೈ ಡಿಪಾರ್ಟ್‌ಮೆಂಟಲ್ಲಿ ಅಸಿಸ್ಟೆಂಟ್ ಇಂಜಿನಿಯರಾಗಿದ್ದೇನೆ." ಅಂತ ಹಲ್ಲು ಕಿರಿಕೊಂಡು ನಮಸ್ಕಾರ ಹೊಡದು ನಿಂತುಕೊಂಡ.

"ಹಾಗಿದ್ರೆ ಒಂದು ಕೆಲ್ಸಾ ಮಾಡಿ. ನಂ ಸಂಘದ ಪ್ರೆಸಿಡೆಂಟ್ ಮುಖಾಂತರ ಒಂದು ಅರ್ಜಿ ತಗೊಂಡು ಬನ್ನಿ...cut of turn promotion ಕೊಡಿಸೋಣವಂತೆ"

"ನಾನು ಬಂದದ್ದು ಪ್ರಮೋಷನ್‌ಗೋಸ್ಕರ ಅಲ್ಲ ಸಾರ್..."

"ಗೊತ್ತಾಯ್ತು ಗೊತ್ತಾಯ್ತು. ನಿಂ ಬಾಸನ್ನ ಈ ಊರಿಂದ ಎತ್ತಿ ಹಾಕ ಬೇಕು ಅನ್ನೋ ತಾನೆ ? ಆಯ್ತು, ನಾಳೆ ನನ್ನನ್ನ chambersನಲ್ಲಿ ಬಂದು ಕಾಣಿ. ನಾಳೆ ಸಂಜೇನೆ ಅವರಿಗೆ ಎತ್ತಂಗಡಿ ಮಾಡೋಣವಂತೆ"

ಫಲೇ ಚಚ್ಚಿಕೋ ಬೇಕೂ, ಇಂಥಾವರನ್ನ ನಂಬಿಕೊಂಡ್ರೆ ಅಂತ ಅನ್ನಿಸಿದ್ರೂ ಬರೀ ಕೈನಲ್ಲಿ ವಾಪಸು ಹೋಗಬಾರದೂ ಅಂತ ಅಂದ್ಕೊಂಡು ಒಂದು ಕಾಲು ಘಂಟೇ ಕಷ್ಟಪಟ್ಟು ವಿಷಯಾನ ತಲೇಗೆ ಹೋಗೋ ಹಾಗೆ ಮಾಡ್ದ.

ಆದ್ರೆ ಅವರ reaction ಬೇರೆ ಥರಾನೇ ಇತ್ತು.

"ಹಾಗೇ ಇರ್ಲಿ ಬಿಡಿ ಇವ್ರೇ. ಈ ಊರಲ್ಲಿ ಅರ್ಧ ಜನಾ opposition ನೋರಿಗೆ ಓಟು ಹಾಕಿದ್ದೋರು. ಮಿಕ್ಕೋರು ನಂ CM ಕಡೆಯವ್ರು...ಒಂದು ಹತ್ತು ಸಲಾ ಪೂರ್ವಾಷಾಢಾ ಉತ್ತರಾಷಾಢಾ ಅಂತ ಚೆನ್ನಾಗಿ ಆದ್ರೆ ಇವ್ರುಗಳಿಗೆ ಬುದ್ಧೀ ಬರತ್ತೆ.

ಸುಬ್ಬಯ್ಯನವರು ಒಂದು ವೇಳೆ ಹೀಗೆ ಮಾತಾಡಿದ್ರೂ ಆಡಬಹುದು ಅಂತ ಮನೆಯಿಂದ ಹೊರಡೋವಾಗಲೇ ಯಾಕೋ ಒಂದು ಥರಾ ಅನುಮಾನ ಬಂದಿತ್ತು. ಹಾಗಾಗಿ ಅದಕ್ಕೆ ಒಂದು line ತಯಾರು ಮಾಡಕೊಂಡೇ ಬಂದಿದ್ದ.

"CM factionನವರಿಗಾಗ್ಲಿ, oppositionನವರಿಗಾಗ್ಲಿ ಪೂರ್ವಾಷಾಢಾನೋ, ಉತ್ತರಾಷಾಢಾನೋ, ಇಲ್ಲಾ ಮತ್ತೊಂದೋ ಆಗಿ, ನಾಳೆ ನೀವು CM ಆಗೋ ಥರಾ ಆದ್ರೆ,ಅದಕ್ಕಿಂತ ಸಂತೋಷದ ವಿಷಯ ಇನ್ನೊಂದು ಇರೊಲ್ಲ ಸಾರ್ ...ಆದ್ರೆ ನಿಮ್ಮನೆಗೂ ಬರ್ತಾ ಇರೋದು ನಂ ಹಾಳು lake ನೀರೇ ಸಾರ್..ಒಂದು ವೇಳೆ—God forbid—ತಮಗೇನಾದ್ರೂ jaundiceಓ ಇಲ್ಲಾ cirrhosis ಅಂತ ಆದ್ರೆ, ನಮ್ಮ ಜನಗಳಿಗೆ ದಿಕ್ಕೂ ಅಂತ ಯಾರು ಇರ್ತಾರೆ ಸಾರ್?"

Bull's eye ! ಕುಡಿಯೋಕ್ಕೆ ಅಂತ ಎತ್ತಿದ್ದ ಗ್ಲಾಸನ್ನ ಹಾಗೇ ಕೆಳಗೆ ಇಟ್ಟು, ಒಂದು ಥರಾ ಗಾಬರೀಲೆ ಹೇಳಿದ್ರು:

"ಮೊನ್ನೆ ನಮ್ಮ ಡಾಕ್ಟರ ಹತ್ತಿರ check upಗೆ ಅಂತ ಹೋಗಿದ್ದೆ, ಅವ್ರೂ ಕೂಡ ಇದೇ cirrhosis ಬಗ್ಗೇನೆ ಹೇಳಿದ್ರು..,ಸ್ವಲ್ಪ ಡ್ರಿಂಕ್ಸ್‌ನ ಕಡಿಮೆ

ಮಾಡೋದು ಒಳ್ಳೇದು ಅಂತ advice ಕೊಟ್ರು. ಈಗ ನೋಡಿದ್ರೆ ನೀವು ಹೇಳ್ತೀರಿ ನೀವು ಸಪ್ಲೈ ಮಾಡೋ ನೀರು ಕುಡಿದ್ರೂ ಅದೇ ಆಗತ್ತೆ ಅಂತ—ಈಗ ನನಗಿರೋ ಪ್ರಾಬ್ಲಮ್ಮೂ ಅಂದ್ರೆ ಇವೆರಡರಲ್ಲಿ ಯಾವುದನ್ನ ಕಡಿಮೆ ಮಾಡಬೇಕೂ ಅನ್ನೋದ"

"ಈ ಥರಾ ನೀರು ಕುಡಿದು ತಮ್ಮ ಆರೋಗ್ಯ ಹಾಳು ಮಾಡಿಕೊಳ್ಳೊಲ್ಲ ಅಂತ ನಮ್ಮ ಜನಗಳಿಗೆ ನಿಮ್ಮಿಂದ ಭರವಸೆ ಬೇಕು ಸಾರ್...ವ್ಹಿಸ್ಕಿ ವಿಷಯ ನಿಮಗೆ ಬಿಟ್ಟದ್ದು"

"ಇಲ್ಲಿ ನೋಡಿ ಮಿಸ್ಟರ್ ಸುಂದರ್, ಇದೇ ಗ್ಲಾಸನ್ನ ಹಿಡಕೊಂಡು ಪ್ರಮಾಣ ಮಾಡ್ತಾ ಇದ್ದೀನಿ—ಮುಂದಿನ ಭಾನುವಾರದ ಹೊತ್ತಿಗೆ ನಿಮ್ಮ ಸಮಸ್ಯೆಗೆ ಒಂದು ಪರಿಹಾರ ಕಂಡುಹಿಡಿದಿರ್ತೀನಿ...ಆಯ್ತು ಹೋಗಿ ಬನ್ನಿ"

ಸುಬ್ಬಯ್ಯನವರು ನಂಬರ್ ಒನ್ ತರಲೆ. ಮಾಡಬೇಕೂ ಅಂತ ಅಂದ್ಕೊಂಡ ಕೆಲಸಾನ ತಲೆಗಳನ್ನ ಒಡಿಸಾದರೂ ಮಾಡಿ ತೀರಿಸೋ ಅಂಥಾವರು. ಸದ್ಯ. ಈಗಲಾದ್ರೂ ಆ ನಾಯಕನ ಪಾಳ್ಯದ ಪುಂಡರಿಗೆ ತದಕೋರು ಅಂತ ಒಬ್ಬರು ಹುಟ್ಕೊಂಡ್ರಲ್ಲ ಅಂತ ತುಂಬಾ ಖುಷಿಯಾಯ್ತು ಸುಂದ್ರೂಗೆ.

ಒಂದು ವಾರದಲ್ಲಿ ಅದು ಹ್ಯಾಗೆ ಆ ಕೆಲ್ಸಾ ನಡಸ್ತಾರೆ ಅಂತ ಅನ್ನೋದನ್ನ ನೋಡಬೇಕೂ ಅನ್ನೊ ಆಸೆ ಅವನಿಗಿದ್ರೂ, ಅದು ಮಾತ್ರ ಸಾಧ್ಯ ಆಗಲಿಲ್ಲ—ದೊಡ್ಡ ಸಾಹೇಬ್ರು ಅವನನ್ನೂ ಕರಕೊಂಡು ಒಂದು ಆರು ದಿನದ Inspection tourಗೆ ಅಂತ ಇರೋ ಊರುಗಳಿಗೆಲ್ಲಾ ಕರಕೊಂಡು ಹೋದ್ರು.

ಮುಂದಿನ ಭಾನುವಾರ ಊರಿಂದ ಬಂದವನೇ ನೇರವಾಗಿ ಸುಬ್ಬಯ್ಯನವರ ಮನೆಗೆ ಓಡಿದ.

ಅವರೂ ಇವನಿಗೇ ಕಾಯ್ತಾ ಇದ್ರೂ ಅನ್ನೋ ಥರ ಇತ್ತು, ಬಂದ ತಕ್ಷಣ ಅವನಿಗೆ ಒಂದು ದೊಡ್ಡ ಗ್ಲಾಸಲ್ಲಿ ನೀರು ತರಿಸಿ ಕೊಟ್ರು. ನೋಡಿದ್ರೆ ಒಳ್ಳೆ crystal clear. ಕುಡಿದು ನೋಡಿದ...ಹೌದು. ಅನುಮಾನಾನೆ ಇಲ್ಲ Lakeನ ನೀರು ಯಾವತ್ತೂ ಈ ರೀತಿ ಇರ್ಲಿಲ್ಲ.

"ಸಾರ್ ಗಂಡಸೂ ಅಂದ್ರೆ ತಾವು ಸಾರ್ . . ಆ ನಾಯಕನ ಪಾಳ್ಯದವರಿಗೆ ಬಾಲಾ ಕತ್ತರಿಸೋಕ್ಕೆ ಇದುವರೆಗೂ ಯಾರಿಗಾದ್ರೂ ದಂ ಇತ್ತಾ ಸಾರ್?"

ಆದ್ರೆ ಯಾಕೋ ಆ ಇವನ್ನ ಕೇಳಿ ಅವರಿಗೆ ಗಾಬರಿಯಾದ ಹಾಗೆ ಕಾಣಿಸ್ತು.

"ಆ ನಾಯಕನ ಪಾಳ್ಯದವರನ್ನ ಮುಟ್ಟಿ ಬದುಕಿದೋರು ಉಂಟೆ ? ಹಾಗೇನಾದ್ರೂ ನಾನು ಮಾಡಿದ್ದಿದ್ರೆ ಇವತ್ತು ನಾನೂ, ನಮ್ಮ C Mಊ ಎಲ್ಲಾ Employment Exchange ಮುಂದೆ ಕ್ಯೂ ನಿಂತಿರಬೇಕಾಗಿ ಬರ್‍ತಿತ್ತು."

"ಹಾಗಾದ್ರೆ ಈ ಇಷ್ಟು ಒಳ್ಳೇ ನೀರು .. ಅದು ಹ್ಯಾಗೆ ನಂ Lake ಇಂದ ಬಂತು ಸಾರ್ ?"

"Lateral thinking, my boy Lateral thinkingಉ... ನೀವು ಹೋದ ವಾರ ಬಂದು ಹೋದ ಮೇಲೆ ನಾನು ತುಂಬಾನೆ ತಲೆ ಕೆಡಿಸಿಕೊಂಡು ಕೊನೆಗೆ flash ಆಯ್ತು, ನೋಡಿ...ನಂ ಡಿಪಾರ್ಟ್‌ಮೆಂಟಿಗೆ ಕಂಟ್ರಾಕ್ಟರ್ ಇದ್ದಾರಲ್ಲ ಪುಟ್ಟಸಾಮಪ್ಪನೋರು, ಅವರಿಗೆ ಹೇಳಿದೆ. Rig ತಗೊಂಡು ಬಂದು ಹಗಲೂ ರಾತ್ರಿ ಕೆಲ್ಸ ಮಾಡಿ, tube well ತೋಡಿಕೊಟ್ರು ನೂರಿಪ್ಪತ್ತು ಅಡಿಗೆ ಎಂಥಾ ನೀರೂ ಅಂತೀರ ಸಮೃದ್ಧಿಯಾಗಿ ಒಂದೂವರೆ ಸಾವಿರ ಗ್ಯಾಲನ್ yieldಉ .."

ಕೊರಡೀಗೆರಡು ಮಂಚ, ಎರಡು ಕುರ್ಚಿ; ಎರಡು ಮೇಜು ತುಂಬಿಬಿಡ್ತಾರೆ, ನಮ್ಮ ಹಾಸ್ಟೆಲಿನಲ್ಲಿ. ಇಸ್ತ್ರೀಟಾಡುಕ್ಕೆ ಜಾಗವೇ ಇಲ್ಲ ಎಂದು ವಿದ್ಯಾರ್ಥಿಯೊಬ್ಬ ದೂರಿದನಂತೆ.

ಸವಾಲಿಗೆ ಉತ್ತರ

ಕೆ. ಜಿ. ಸತೀಶ್

ಹಂಪನಿದಿರು ನಿಂದ ಕುಂತಿಯಂತೆ
ಅವತರಿಸಿದಳು ನನ್ನೆದುರು ಅಪರಂಜಿ

ಓ ಮಾತೆ,
ಪದ್ಯ ಬರೆಯುವುದಷ್ಟು ಕಷ್ಟವಲ್ಲದ ಮಾತೆ ?
ನನ್ನರಿವು ತಿಳಿವು ಬರೀ ಜವಾ ವಿರ್ಜಿನ ಖಾತೆ
ಒಲಿದಿಲ್ಲ ನನಗೆ ಸರಸತಿ,
ಕುರಿ ಮೇಯ್‌ಸದೆಯುಂ ಕಾವ್ಯ ಪ್ರಯೋಗದಿ
ಅಪರಿಚಿತ ಮತಿ
ಎತ್ತಣ ನಾನು ಎತ್ತಣ ಕವಿತೆ

ತಲೆಮರೆಸಲೇ ಬೇಕು ಸೋಲಿಗಂಜಿ
ಇಲ್ಲವೆಂದಾದಲ್ಲಿ
ಹಿಂದೊಬ್ಬ ಕುರುಬನಿಗೆ ಒಲಿದು ಬಂದಂತೆ
ಒಲಿದು ಬರಬೇಕು ಕಾಳಿಕಾ ಮಾತೆ

ಎಲ್ಲಿರುವೆ ಮಾತೆ ?

ಓಗೊಟ್ಟು ಬಂದವಳೇ
ದುರುದುರನೆ ನೋಡದಿರು—ಎದುರು ಮಾತಾಡದಿರು
ಗಂಜಿಯನು ಕುಡಿ ಮೊದಲು—ದೂರ ಸರಿವುದು ತೊದಲು
ತಡಮಾಡದಿರು ಇನ್ನು—ಹಿಡಿ ಕೈಯಲ್ಲಿ ಪೆನ್ನು

ಓ ಮಾತೆ, ನಿನ್ನ ಮಾತೇ ನನ್ನ ಗೀತೆ
ಅಪರಂಜಿ ಕವಿತೆ

ಕನಸೆಂದು ತಿಳಿದಿದ್ದೆ, ತಿಳಿವು ಕನಸಾಗಿತ್ತು.

ಮಾತು ಬಲ್ಲವನಿಗೆ ಜಗಳವಿಲ್ಲ !

—ಶಿವಾನಂದ್

ಅಂದು ಸಂಜೆ ರಾಜಣ್ಣನ ಮನೆಯಲ್ಲಿ ಊಟ. ನಾನು ಅವನ ಮನೆ ಸೇರಿದಾಗ ಘಂಟೆ ಏಳೂವರೆ. ದೇವೇಂದ್ರ, ಮುನ್ಸೀ ಗೌಡ ಆ ವೇಳೆಗಾಗಲೇ ಆಗಮಿಸಿದ್ದರು. ಭರದಿಂದ ಮಾತುಕತೆ ಸಾಗಿತ್ತು. ದೇವೇಂದ್ರ ಯಾವುದೋ ಹಳೆಯ ಅನುಭವ ಹೇಳುತ್ತಿದ್ದ.

O O O O O

ನಾನು ದೆಹಲೀಲಿ ಓದು ಮುಗಿಸಿ ಬೆಂಗಳೂರಿಗೆ ಬಂದ ದಿನಗಳು. ನನ್ನ ಸಹಪಾಠಿ ಜಗನ್ನಾಥ ಕಾಮತ್ ಮಂಗಳೂರಿಗೆ ಹಿಂತಿರುಗಿದ್ದ. ಎರಡು ವರ್ಷದ ನಂತರ ಕಾಮತ್ ನನ್ನ ಮದುವೆಗೆ ಬಂದು, ಮೂರು ದಿನ ಇದ್ದು ಹೋಗಿದ್ದ. ಜಗ್ಗುವಿನ ಅಪ್ಪ ಮಂಗಳೂರಿನಲ್ಲಿ ಭಾರಿ ಹೋಟೆಲ್ ಮಾಲೀಕರು. ಅವರ ಗಾಯತ್ರಿ ಭವನದ ತಿಂಡಿ ತೀರ್ಥಗಳ ಖ್ಯಾತಿ ನಾಡಿನಲ್ಲೆಲ್ಲಾ ಹರಡಿತ್ತು.

ಹಲವು ತಿಂಗಳುಗಳ ನಂತರ ಜಗ್ಗು ಫೋನ್ ಮಾಡಿದ. "ಶನಿವಾರ ಮಂಗಳೂರಿಗೆ ಬಂದ್ಬಿಡು. ನನ್ನ ಮದುವೆ ನಿಷ್ಕರ್ಷೆಯಾಗೋ ಹಾಗಿದೆ. ನನ್ನ ನೋಡುಕ್ಕೆ ಹುಡುಗಿ ಬರ್ತಿದಾಳೆ. ನೀನೂ ಇದ್ರೆ ನನಗೆ ಧೈರ್ಯ"

ಮಂಗಳೂರು ಅಂದಾಕ್ಷಣ ಅವರ ಹೋಟೆಲಿನ ನಳಪಾಕ ನೆನಪಿಗೆ ಬಂದು ಬಾಯಲ್ಲಿ ನೀರೂರಿತು. ಶುಕ್ರವಾರ ರಾತ್ರಿ ಬಸ್ ಹಿಡಿದೆ.

ಸಂಜೆ ವಧು (ವರ?) ಪರೀಕ್ಷೆ. ಪರಸ್ಪರ ಕುಶಲ ಎಲ್ಲಾ ಆದ ಮೇಲೆ ಜಗ್ಗುವಿನ ತಾಯಿ ಘಮ ಘಮಿಸುತ್ತಿರುವ ಖಾರಾ ಭಾತ್, ಬಾದಾಮಿ ಹಲ್ವ ತಂದರು. ನಾನು, ತಟ್ಟೆ ಇನ್ನೂ ದೊಡ್ಡದಾಗಿದ್ದರೆ ಚೆನ್ನಾಗಿತ್ತು ಅಂತ ದುರಾಶೆ ಪಡುತ್ತಾ ತಿನ್ನುಕ್ಕೆ ಶುರು ಹಚ್ಚಿದೆ. ಜಗ್ಗು ಕದ್ದು ಹುಡುಗಿಯನ್ನು ನೋಡಿಯೇ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ. 'ತಗೊಳ್ಳಿ ತಿಂಡಿ' ಅಂದರು ಕಾಮತ್ ಸೀನಿಯರ್. ಯಾಕೋ ಆ ಹುಡುಗಿ 'ತಿಂಡಿ ಬೇಡ ಅಂಕಲ್' ಅಂದು ಬಿಟ್ಟಳು. ನನಗೆ ಉಸಿರೇ ಕಟ್ಟಿದಂತಾಯಿತು. ಗಾಯತ್ರಿ ಭವನದ ತಿಂಡಿಗೆ ದುಬಾಯಿಂದ

ಜನ ಬರ್ತ್ತಾರೆ ಅಂತ ಪ್ರತೀತಿ. ಕಾಮತ್‌ರವರಿಗೆ ಸ್ವಲ್ಪ ಕೋಪ ಬಂದ ಹಾಗೆ ಕಾಣಿಸ್ತು. ಅತಿಥಿಗಳೆಲ್ಲಾ ಹೊರಟು ಹೋದ ಮೇಲೆ ನಾನು ನಿಧಾನವಾಗಿ 'ಹುಡುಗಿಯೇನೋ ರೂಪವಂತೆ, ಸಭ್ಯ ಮನೆತನ' ಅಂತ ಶುರು ಮಾಡಿದೆ. ಕಾಮತ್ ಎದ್ದು ನಿಂತರು—ಎತ್ತರದ ಆಳು. ಕ್ಷುದ್ರರಾಗಿ ಗುಡುಗಿದ ಆ ವಾಕ್ಯ ನನ್ನ ಕಿವಿಯಲ್ಲಿ ಇಂದೂ ಮೊಳಗುತ್ತಿವೆ.

"ಛಾತಿ ಒಲ್ಲದವಳಿಗೆ ಜಗ್ಗು ಇಲ್ಲ !"

O O O O

ದೇವೇಂದ್ರನ ಕಥೆ ಕೇಳಿ ಕೂತಿದ್ದವರೆಲ್ಲಾ 'ಹೋ' ಎಂದು ನಕ್ಕರು. ನನಗೆ ತಲೆ ಬುಡ ಅರ್ಥವಾಗಲಿಲ್ಲ. ಅಷ್ಟರಲ್ಲಿ ರಾಜಣ್ಣ ಮಾತು ಶುರು ಮಾಡಿದ.

ಹೋಟೆಲ್ಲು ಅಂದಾಗ ಜ್ಞಾಪಕ ಬಂತು ನೋಡಿ. ಕೆಲವು ತಿಂಗಳ ಕೆಳಗೆ ನಗರದ ಪಂಚತಾರ ಹೋಟೆಲಿನಲ್ಲಿ ಉತ್ತರ ಭಾರತದ ಸುಪ್ರಸಿದ್ಧ "ಜುಗಲ್ ಬಂದಿ" ಗಾಯಕರು ಬಂದಿದ್ದಾಗ ನಡೆದ ಸಮಾಚಾರ. ನಮ್ಮ ಶಿವಣ್ಣನಿಗೆ ಮೊದಲಿನಿಂದಲೂ ಹಿಂದೂಸ್ಥಾನಿ ಗಾಯನದ ಖಾಯಷ್ಟು. "ಜುಗಲ್ ಬಂದಿ" ಇದೆ ಅಂತ ತಿಳಿದ ತಕ್ಷಣ ನೂರು ರೂಪಾಯಿ ಕೊಟ್ಟು ಮುಂದಿನ ಸಾಲಿನಲ್ಲಿ ಟಿಕಿಟ್ ಖರೀದಿಸಿದ. ಶಿವಣ್ಣನಿಗೆ ಗಾಯನ ಹೇಗೆ ಖಯಾಲೀನೋ ಎಲೆಡಿಕೆ ಮೆಲ್ಲೋದೂ ಅಷ್ಟೇ ಖುಷಿ. ಖುಷಿ ಏನು ಬಂತು, ಅದೊಂದು ಬಿಡಲಾಗದ ಚಟ.

ಆ ಸಂಜೆ ಶಿವಣ್ಣನ ಜೊತೆಗೆ ನಾನೂ ಹೋಗಿದ್ದೆ. "ಜುಗಲ್ ಬಂದಿ" ಕೇಳಲು.

ನಾವು ಕುಳಿತಿದ್ದ ಸೀಟು ಅತಿ ಮುಂದಿನ ಸಾಲಿನಲ್ಲಿ. ಸಂಗೀತಗಾರರ ಮುಖದ ಮುಂದೇನೇ ಕೂತ ಹಾಗಿತ್ತು. ಗಾಯನ ಶುರುವಾಯಿತು. ಇಲ್ಲಿ ನಮ್ಮ ಶಿವಣ್ಣನ ಎಲೆಡಿಕೆ ಮೆಲ್ಲೋದು ಅವ್ಯಾಹತವಾಗಿ ಸಾಗಿತ್ತು. ಶಿವಣ್ಣ ಎಲೆಡಿಕೆ ಹಾಕೋದೇ ಒಂದು ವಿಶೇಷ ಕಲೆ. ಒಂದು ಅಲ್ಯೂಮಿನಿಂ ಟಿಫಿನ್ ಬಾಕ್ಸ್‌ನಲ್ಲಿ, ಎಲೆ, ಸುಣ್ಣ, ಬಟ್ಟಲಡಿಕೆ, ಹೊಗೆಸೊಪ್ಪು ಎಲ್ಲಾ ಇಟ್ಟಿರ್ತಾನೆ. ಮೂರು ನಿಮಿಷಕ್ಕೊಮ್ಮೆ ಡಬ್ಬಿ ತೆಗೆಯೋದು, ಎಲೆ ಹಾಕೋದು, ಬಟ್ಟಲಡಿಕೇನ 'ಖಠಂ' ಅಂತ ಅಗಿಯೋದು. ಎಲ್ಲಾ ವಚನವಾಗೋವರ್ಗೂ ಮೆಲ್ಲೋದು. ಪುನಃ ಶುರು. ಹೀಗೆ ಸಾಗಿತ್ತು. ಒಂದೊಂದು ಸಲ 'ಖಠಂ' ಅಂದಾಗಲೂ ಗಾಯಕರು ನಮ್ಮನ್ನೇ

ನೋಡೋರು. ನನಗೋ ತೀರಾ ನಾಚಿಕೆ. ಒಂದು ಬೋಲ್ ಮುಗಿದ ಮೇಲೆ ಗಾಯಕರು ವ್ಯವಸ್ಥಾಪಕರನ್ನು ಕರೆದು ಶಿವಣ್ಣನನ್ನು ಬೊಟ್ಟುಮಾಡಿ ತೋರಿಸಿ ಏನೋ ಹೇಳಿದರು. ವ್ಯವಸ್ಥಾಪಕರು ಬಂದು ಶಿವಣ್ಣನನ್ನುದ್ದೇಶಿಸಿ,

"ನೋಡಿ. ನೀವು ಎಲೆಡಿಕೆ ಮೆಲ್ಲೋ ವೈಖರಿ ಗಾಯಕರಿಗೆ ಡಿಸ್ಟರ್ಬ್ ಆಗ್ತಾ ಇದೆ. ದಯವಿಟ್ಟು ಹಿಂದಿನ ಸಾಲಿಗೆ ಬನ್ನಿ. ಬೇಕಾದರೆ ಹಣ ಹಿಂತಿರುಗಿ ಸ್ತೇವೆ" ಅಂದ್ರು. ಸರಿ, ಇಬ್ರೂ ಹಿಂದೆ ಹೋದ್ವಿ. ಇದನ್ನು ನೋಡಿಯೋ ಗಾದೆ ಮಾಡಿದ್ದಾರೆ ಅಂತ ಕಾಣುತ್ತೆ.

"ಕೂತು ಮೆಲ್ಲುವವನಿಗೆ ಜುಗಳ ಸಲ್ಲ !"

O O O O

ನೆರೆದಿದ್ದವರೆಲ್ಲರೂ ಇನ್ನೊಮ್ಮೆ "ಹೋ" ಎಂದು ಗಹಗಹಿಸಿದರು. ಅರ್ಥ ವಾಗದಿದ್ದರೂ ನಾನೂ ಹ್ಹಿ, ಹ್ಹಿ, ಎಂದು ದನಿಗೂಡಿಸಿದೆ. ಅಷ್ಟರಲ್ಲಿ ಮುನೇ ಗೌಡ ಶುರು ಮಾಡಿದ.

ಹೈದರಾಬಾದಿನಲ್ಲಿ ನಡೆದ ಘಟನೆ ಇದು. ನನ್ನ ಚಿಕ್ಕಪ್ಪನ ಮಗ ಚಂದ್ರೇ ಗೌಡ, ಮೆಟಲರ್ಜಿಲಿ ಡಾಕ್ಟರೇಟ್. "ಭಾರತೀಯ ಧಾತು ನಿಗಂ"ನಲ್ಲಿ ವಿಜ್ಞಾನಿ. ಜಗತ್ತಿನಲ್ಲಿ ಅತೀ ಅಪೂರ್ವವಾದ ಖನಿಜಗಳನ್ನ ಈ ಸಂಸ್ಥೆಯಲ್ಲಿ ಶುದ್ಧೀಕರಿಸಿ ರಕ್ಷಣಾ ಕೈಗಾರಿಕೆಗಳಿಗೆ ಒದಗಿಸ್ತಾರೆ.

ಡಾ॥ ಚಂದ್ರೇ ಗೌಡ ಕೆಲಸಕ್ಕೆ ಸೇರಿದ ಹೊಸದು. ಟೈಟಾನಿಯಂ ಎಂಬ ಅಪೂರ್ವ ಧಾತುವನ್ನ ಅಮೆರಿಕೆಯಿಂದ ತರಿಸಿದ್ದರು. ಅತೀ ದುಬಾರಿ ವಸ್ತುವಂತೆ ಅದು. ಅನೇಕ ಲಕ್ಷ ರೂಪಾಯಿ ತೆತ್ತು ಒಂದು ಗಾಜಿನ ಬುರುಡೆಯಲ್ಲಿ ಹಿಡಿಯು ವಷ್ಟು ಧಾತುವನ್ನ ಆಮದು ಮಾಡಿಕೊಂಡಿದ್ದರು. ಚಂದ್ರು ಅದರ ಶುದ್ಧತೆ ಯನ್ನ ಪ್ರಯೋಗಗಳ ಮೂಲಕ ಕಂಡುಹಿಡಿಯಬೇಕಾಗಿತ್ತು. ಅವನ ವಿಭಾಗದ ಡೈರೆಕ್ಟರು "ನೋಡಿ ಡಾ॥ ಚಂದ್ರು- ಇದು ಬಹಳ ಅಮೂಲ್ಯ ವಸ್ತು, ಹುಷಾರಾಗಿ ಬಳಸಿ" ಎಂದು ಹೇಳಿ ಅದನ್ನು ನೀಡಿದ್ದರು. ನಮ್ಮ ಚಂದ್ರುವಿನ ದುರಾದೃಷ್ಟಕ್ಕೆ, ಆ ದಿನವೇ ಅವನಿಗೆ ಭೀಷ್ಮ ನೆಗಡಿ. ಗಾಜಿನ ಬುರುಡೆ ಕೈಯಲ್ಲಿದ್ದಂತೆಯೇ ಭಾರೀ ಸೀನೊಂದು ಬಂತು. 'ಆಕ್ಷಿ' ಎನ್ನುವಷ್ಟರಲ್ಲಿ ಬುರುಡೆ ಜಾರಿ, ಧಾತುವೆಲ್ಲಾ ಚೆಲ್ಲಾಪಿಲ್ಲಿ. ನೆಲದ ಧೂಳಿನೊಡನೆ ಸೇರಿದ ಧಾತು ಶುದ್ಧೀಕರಣಕ್ಕೆ ಪುನಃ ಅಮೆ

ರಿಕೆಗೇ ಹೋಗಬೇಕು. ತನ್ನ ಕೆಲಸ ಹೋಯಿತೆಂದೇ ತಿಳಿದ ಚಂದ್ರು, ಡೈರೆಕ್ಟರ ಹತ್ತಿರ ಹೋಗಿ, ನಿಜ ಸಂಗತಿ ತಿಳಿಸಿ, ಬೇಕಾದರೆ ತಾನು ರಾಜೀನಾಮೆ ನೀಡುವು ದಾಗಿ ತಿಳಿಸಿದ. ಡೈರೆಕ್ಟರ್ ಕರುಣಾಳು. ಚೆನ್ನಾಗಿ ಬಯ್ದರು. ಆದರೆ "ರಾಜೀ ನಾಮೆ ಮಾತು ಬೇಡ, ಇನ್ನೊಮ್ಮೆ ಹುಷಾರಾಗಿರಿ" ಅಂತ ಬೆನ್ನು ತಟ್ಟಿ ಕಳಿಸಿದ ರಂತೆ.

ಕೆಲಸ ಕಳೆದುಕೊಳ್ಳುವ ಹೆದರಿಕೆಯಲ್ಲಿದ್ದವನಿಗೆ, ಡೈರಕ್ಟರ ಬರೀ ಬಯ್ಗಳು, ಕಿವಿಗೆ ಬೆಲ್ಲದಂತೆ ಸಿಹಿಯಾಗಿತ್ತಂತೆ. ಚಂದ್ರು ಇದನ್ನೆಲ್ಲಾ ನನಗೆ ಆಮೇಲೆ ಹೇಳಿ ದಾಗ, ಹಳೇ ಗಾದೆಯೊಂದು ನೆನಪಿಗೆ ಬಂತು ನೋಡಿ.

"ಧಾತು ಚೆಲ್ಲಿದವನಿಗೆ, ತೆಗಳಿಕೆ ಬೆಲ್ಲ !"

O O O O

["ಕತೆ ಹೇಳುವ ಈ ಆಟ ಗೊತ್ತಾಯಿತಲ್ಲ! ಈ ಕೆಳಗಿನ ಗಾದೆಯನ್ನು ಲಕ್ಷ್ಯ ದಲ್ಲಿಟ್ಟು ಒಂದು ಕಥೆ ಕಳಿಸಿ ನೋಡೋಣ.

ಮಾತು ಆಡಿದರೆ ಹೋಯಿತು—ಮುತ್ತು ಒಡೆದರೆ ಹೋಯಿತು.

ಕಡೆಯ ತಾರೀಖು—ಮೇ ಹದಿನೈದು —ಸಂ.]

ಒಂದೂರಿನಲ್ಲಿ ಒಂದು ಷಹರಿನ ಕಾಗೆ ಇತ್ತಂತೆ. ಅದಕ್ಕೊಂದು ಕಡುಬು ಸಿಕ್ಕಿತಂತೆ. ಕಾಗೆ ಮರದ ಮೇಲೆ ಕೂತು ಕಡುಬನ್ನು ಕೊಕ್ಕಿನಲ್ಲಿಟ್ಟುಕೊಂಡಿ ದ್ದಾಗ, ಯಥಾಪ್ರಕಾರ ನರಿ ಬಂದು ''ಕಾಕ.ರಾಜಾ, ನಿನ್ನ ಸುಶ್ರಾವ್ಯವಾದ ಹಾಡು ಕೇಳಬೇಕು'' ಅಂತಂತೆ. ಕಾಗೇಗೆ ಬಲು ಜಂಭ ಬಂತಂತೆ. ಮೆಲ್ಲಗೆ ಕಡುಬನ್ನ ಕೊಂಬೇ ಮೇಲಿಟ್ಟು, ಕಾಲಿನಿಂದ ಅದುಮಿಕೊಂಡು 'ಕಾ, ಕಾ, ಅಂತ ಕರ್ಕಶ ವಾಗಿ ಕೂಗಿತಂತೆ.

ನರಿ ಬಾಲ ಮುದುರಿಕೊಂಡು, ಕಿವಿ ಮುಚ್ಚಿಕೊಂಡು ಓಡಿ ಹೋಯ್ತಂತೆ.



"ಬಂದ್ ಅಂತ ಸುಮ್ನೆ ಕುತ್ಕೊಳ್ಳೋ ಬದ್ಲು ಈರುಳ್ಳಿ ನಾದ್ರೂ ಮಾರ್ಕೊಂಬರ್ರೀ"

ವ್ಹೋಯ್ತೀರೇನ್ರಿ ?

ಎಸ್. ಎನ್. ಶಿವಸ್ವಾಮಿ

ವ್ಹೋಯ್ತೀರೇನ್ರಿ ? ಕರಗಕ್ ಪ್ಹೋಯ್ತೀರೇನ್ರಿ ?
ಬೆಂಗ್ಳೂರ್ ಕರಗಕ್ ವ್ಹೋಯ್ತೀರಾ ?
ನಿಜವಾಗ್ ಈ ಸಲ ಪ್ಹೋಯ್ತೀರಾ ? ಅಂಗಾರೆ
ಯೋಳೋದ್ನೆಲ್ಲ ಕೇಳ್ಕಂಡೋಗಿ ॥

ಬಸ್ಸು, ಲಾರಿ, ತತ್ರಿಸ್ಕೊಳ್ಳೊಕ್
ಆಯುಸ್ ಗಟ್ಟಿ ಐತೇನ್ರಿ ?
ಯಂಗೂ ನೀ ವ್ಹೊಂದ್ ಕೆಲ್ಸ ಮಾಡಿ—
ಇನ್ಸೂರ್ ಮಾಡ್ಕಂಡೇ ವ್ಹೋಗಿ ॥

ಯಂಡ್ತ್ರು ಜತೇಗ್ ಬರೋದಾದ್ರೆ
ತಾಳೀ ಅಳ್ಳೀಲೇ ಇಟ್ಹೋಗಿ.
ವಡವೇನೆಲ್ಲ ಇಲ್ಲೇ ಮಡಗಿ,
ನಕಲಿ ಆಕ್ಕೊಂಡೋಗ್ಲಿ ॥

ರೈಲ್ವೆ ಸ್ಟೇಸನ್ ತಲ್ಪಿದ ಕೂಡ್ಲೆ
ಪ್ಹೊಗೆ, ವಾಷ್ಣೆ. ರೋಗದ ಗಾಳಿ,
ಇವ್ಗಳ್ನೆಲ್ಲ ತಡ್ಕೊಳ್ಳೋಕೆ
ಮೂಗಿಗೆ ಬಟ್ಟೆ ಕಟ್ಕೊಳ್ಳಿ ॥

ಅಂಗೂ ಎಚ್ಚೂ ಕಡಿಮೆ ಆದ್ರೆ,
ಒನ್‌ವೇ ಬೋರ್ಡಿನ ದೊಡ್ಡಾ ಸ್ಪತ್ರೇಗ್
ಎಲ್ಲಾನಾ ಒಂಟೋದೀರಿ !
ಸುಮ್ನೆ ಅಳ್ಳೀಗ್ ವಾಪಸ್ ಬನ್ನಿ ॥

ಆಟೋರಿಕ್ಸಾ ಅತ್ಲೇ ಬೇಡಿ.
ಅತ್ಲೇ ಬೇಕಾಗ್ ಬಂತೂಂದ್ರೆ,
ಬದ್ರಾಗ್ ಇಡಕಂಡ್ ಕೊತ್ಕಳ್ಳಿ.
ಬಿದ್ರೆ ಯೆಣಾನೂ ಸಿಕ್ಕೊಲ್ಲ !॥

ಸಿನಿಮಾ ಗಿನಿಮಾ ಇಲ್ಲೇ ನೋಡಿ.
ಅಲ್ಲೋರ್ಗ್ನೋದೂ ಡಿಷುಂ ಡಿಷುಂ !
ಇಲ್ಲೇ ತೆಂಟ್ನಲ್ ನೋಡಿದ್ರಾಯ್ತು.
ದುಡ್ಡೂ ಮಸ್ತಾಗ್ ಉಳೀತೈತೆ ॥

ಕುದುರೆ ಜೂಜಿಗೆ ಓದೀರಿ !
ವಾಪಸ್ ಬರೋ ? ರೈಲು ಚಾರ್ಜಿಲ್ದೆ
ಅವರ್ನ ಇವರ್ನ ಸಾಲ ಕೇಳ್ತಾ
ಅಲ್ಲೇ ಮಾನ ಕಳಿದೀರಿ! ॥

ಅಂಗಾರ್ ಬೆಂಗ್ಳೂರ್ ಪಟ್ಣದಾಗೆ
ಮಾಡೋದೇನು ಅಂತೀರಾ ?
ನ್ಯಾರವಾಗಿ ವಿದಾನ. ಸೌದಕ್ಕೋಗಿ.
ಎದುರಿಗೆ ಪೋಟೋ ಇಡಸ್ಕಳ್ಳಿ ॥

ಮಂತ್ರಿಗೋಳು ಅವ್ರು ಇವ್ರು ಓಗೋದ್ಬರೋದು,
ಮೆರವಣಿಗೆಗ್ಳು, ಅರತಾಳಗ್ಳು,
ಎಲ್ಲಾ ಒಂದೇ ಜಾಗ್ದಲ್ಲಿ,
ಅತ್ತಿರದಿಂದ್ಲೇ ನೋಡ್ಕಳ್ಳಿ ॥

ಆ ಮೇಲ್ ಲಾಲ್‌ಬಾಗ್ಗೂನೂ ವೋಗಿ.
ಕೆಂಪೇಗೌಡ ಗೋಪ್ರದಾಗ್ ಕುಂತ್ಕಂಡ್
ಕಳ್ಳೇಕಾಯಿ, ಕಬ್ಬು ತಿಂದು,
ಸುತ್ಲೂ ಸಿಪ್ಪೆ ಎರಚಾಡಿ ॥

ಕರಗ ನೋಡೋಕ್ ಪೇಟೇಲ್ಯಾಗ
ಸಂಜೇನೇ ಗೊತ್ಮಾಡ್ಕೊಳ್ಳಿ.
ಕರಗ ಬರೋ ಸರಿಪೊತ್ನಲ್ಲಿ
ಒಳ್ಳೇ ನಿದ್ದೆ ಒಂದಿರ್ತೈತೆ ॥

ಕರಗ ಬಂದದ್ ಗದ್ಲ ಕೇಳಿ
ಎಚ್ಚರ ಆದ್ರೆ ದರ್ಸನ ಮಾಡಿ.
ಇಲ್ದೀರೆ ಮುದರ್ಕಂಡ್ ಮನಿಕ್ಕಂಡಿದ್ರು,
ಬೆಳಗಾಗುತ್ಲೂ ಎದ್ಬನ್ನಿ ! ॥



ಸಕುಟುಂಬ ಸಪರಿವಾರ

—ಎಸ್. ವಿ. ವಿ.

ರೈಲು ಪ್ರಯಾಣ ಮಾಡುವ ಮದುವೆ ಪಾರ್ಟಿಗಿಂತ ಖುಷಿಯಾದ ಗುಂಪು ಬೇರೊಂದಿಲ್ಲ. ಅವರಿಗೆ ಯಾವ ಯೋಚನೆಯೂ ಅಡ್ಡಿ ಆತಂಕವೂ ಇಲ್ಲ. ಅವರಲ್ಲಿ ಪ್ರತಿಯೊಬ್ಬರೂ ಹಿರಿಯರು ಕಿರಿಯರೆನ್ನದೆ ಇತರರೆಲ್ಲರನ್ನೂ ಚುಡಾಯಿಸುತ್ತಾರೆ. ಯಾರು ಏನು ಹೇಳಿದರೂ ಎಲ್ಲರೂ ಬಿದ್ದು ಬಿದ್ದು ಕಿಲಕಿಲ ನಗುತ್ತಾರೆ. ಚಿಕ್ಕ ವಯಸ್ಸಿನ ದಂಪತಿಗಳ ಪಾಡಂತೂ ಬಲು ಗೋಳು. ಎಲ್ಲರಿಗೂ ಅವರ ಮೇಲೆ ಕಣ್ಣು. ಪ್ರತಿ ಮಾತಿಗೂ ಅವರು ನಾಚಿ ಕೆಂಚಗಾಗುತ್ತಾರೆ………

* * * *

"ಜಗ್ಗು! ಲೋ! ಜಗ್ಗು! ಚಿನ್ನಿ ನಿಂತಿದಾಳಲ್ಲೋ ? ಎಂಥ ಕಲ್ಲು ಮನಸ್ಸೋ ನಿನ್ನದು ? ಏಳೋ, ಎದ್ದು ಜಾಗ ಕೊಡೋ !" "ಅವನು ಯಾಕೆ ಏಳಬೇಕು ? ಮಡಿಲಲ್ಲೇ ಕೂರಿಸಿಕೊಳ್ಳುತ್ತಾನೆ !"

"ಅದಿರಲಿ, ಭಾವ ! ನೀವು ತಾನೆ ಯಾಕೆ ಒಬ್ಬರೇ ಹೀಗೆ ಗಣೇಶನ ಹಾಗೆ ಕೂತಿರಬೇಕು ? ಅಕ್ಕನನ್ನ ಕೂರಿಸಿಕೊಳ್ಳಿ !"

ಭಾವನಿಗೆ ನಾಚಿಕೆ ಗೀಚಿಕೆ ಏನೂ ಇಲ್ಲ. ಮುದಿ ಭಂಡ.

"ಹೌದೋ ! ಮರೆತೇಬಿಟ್ಟಿದ್ದೆ ! ಎಲ್ಲಿ ಅವಳು ?"

ಆದರೆ, ಅಕ್ಕನಿಗೆ ರೇಗೋದಿಲ್ಲವೆ ?

"ಸಾಕು ಬಿಡಿ ಅಂದ್ರೆ ! ಅರವತ್ತಕ್ಕೆ ಮೊದಲೇ ಅರಳುಮರಳು ನಿಮಗೆ !"

ಗೊಳ್ಳೆಂಬ ನಗು ! ಅವರ ಪ್ರತಿಧ್ವನಿಗೆ ಪಕ್ಕದ ಡಬ್ಬಿಯವರೂ ಬೆದರುತ್ತಾರೆ.

* * *

ಮೇಲಿನ ಹಲಗೆಯಲ್ಲಿಟ್ಟಿರುವ ಬೆಡ್ಡಿಂಗೊಂದು ಕೆಳಗೆ ಬೀಳುತ್ತೆ. ಜಗ್ಗು ಅದನ್ನ ಎತ್ತಿ ಸರಿಯಾಗಿಡಲು ಏಳುತ್ತಾನೆ. ಆಗ, ಚಿನ್ನಿಯನ್ನ ಚಿಕ್ಕ ವಯಸ್ಸಿನ ಹುಡುಗಿಯರೆಲ್ಲ ಸೇರಿ ಜಗ್ಗು ಸೀಟಿಗೆ ತಳ್ಳುತ್ತಾರೆ......

"ಲೋ ! ಒಳ್ಳೆ ಘಾಟಿ ಕಣೋ, ನೀನು ! ಏನೋ ಅಂತ ಇದ್ದೆ. ಹೆಂಡತಿಯನ್ನ ಕೂರಿಸುವುದಕ್ಕೆ ಒಳ್ಳೆ ಉಪಾಯ ಮಾಡಿದೆ"

ಆಗ ಮೂಲೆಯಿಂದ ಜೇಜು ಚಿಕ್ಕಪ್ಪ, "ಅದರಲ್ಲಿ ತಪ್ಪೇನು, ರಾಮು ! ಚಿನ್ನಿ ಕೂರಬೇಕು. ಚಿನ್ನ ನಿಲ್ಲಬೇಕು ! ಅದೇ ಅಲ್ಲವೇನೋ ಈಗಿನ ರೂಲ್ಸು ?"

"ಅದಿರಲಿ ಚಿಕ್ಕಪ್ಪ ! ತಾವು ಯಾಕೆ ಆ ತಿಂಡಿ ಬುಟ್ಟಿ ಕಾಯುತ್ತಾ ಅಲ್ಲೇ ಕೂತಿದೀರಿ ?"

ಮತ್ತೊಂದು ಸಲ ನಗುವಿನ ಹೊಡೆತ ...

* * *

ರಾಮು ಸರೋಜ ಇಬ್ಬರೂ ಕೈಸನ್ನೆ ಕಣ್ಣು ಸನ್ನೆಗಳಿಂದಲೇ ಸಂಭಾಷಣೆ ಜರುಗಿಸುತ್ತಾ ಕುಳಿತಿದ್ದದ್ದು ಜೇಜು ಚಿಕ್ಕಪ್ಪನಿಗೆ ಸಹಿಸಲಿಲ್ಲ. ಪಾಪ, ರಾಮು ದಂಪತಿ ಸಹಿತ ರೈಲು ಪ್ರಯಾಣ ಮಾಡಿದ್ದು ಇದೇ ಮೊದಲು. ಬೇರೆ ಡಬ್ಬಿಯಲ್ಲಿ ಕೂರಲು ಅವನು ನಡೆಸಿದ ಪಿತೂರಿ ಎಲ್ಲಾ ವಿಫಲವಾಯಿತು. ಇಲ್ಲೂ ಕೂಡ ಎದುರು ಬದುರು ಸೀಟು ಸಿಗಲಿಲ್ಲ. ಅವಳೊಂದು ಈಶಾನ್ಯ; ಇವನೊಂದು ನೈರುತ್ಯ ಆದರೂ, ಅಕೊ, "ರಾಮೂ ! ನೀನೆಲ್ಲಿ ಭೂಮಿ ಮೇಲೋ, ಸ್ವರ್ಗದಲ್ಲೋ... ಎಲ್ಲಿ ಈಗ ವಾಸ ?"—ಚಿಕ್ಕಪ್ಪನ ಬಾಣ ! ಆತ ಹಾಗನ್ನಬಾರದಾಗಿತ್ತು ಅಂತ ಎಲ್ಲರಿಗೂ ಅನ್ನಿಸಿತು.

* * *

ಸ್ಟೇಷನ್ ಬಿಟ್ಟು.ಎರಡು ಮೈಲಿ ದೂರ ರೈಲು ಸಾಗುವುದರೊಳಗೆ ಗಾಡಿಯ ನಡುಮಧ್ಯ ಒಂದು ಇಸ್ಪೀಟ್ ಪಾರ್ಟಿ ಹೇಗೋ ಹೊಂದಿಕೊಂಡು ಬಿಡುತ್ತೆ. ಟ್ರಂಕುಗಳನ್ನು ಜೋಡಿಸಿ, ಟವಲುಗಳನ್ನು ಹಾಸಿ, ಚಿಲ್ಲರೆ ಕಾಸುಗಳನ್ನು ಹೆಂಗಸರಿಂದ ಶೇಖರಿಸಿ, ನಶ ದ ಡಬ್ಬಿ ಸಹಿತವಾಗಿ ನಾಲ್ಕು ಜನ ಉಸ್ತಾದರೂ. ಆರು ಜನ ಪ್ರೇಕ್ಷಕರೂ—ಸಿದ್ಧ.

ರಾಮಸ್ವಾಮಿ, ಶೀನು—ಒಂದೇ ಕಡೆ. ಆದರೆ, ಶೀನು ಪ್ರಚಂಡ. ಪಟ್ಟುಗಳನ್ನೆಲ್ಲ ಬಲ್ಲ ಉಸ್ತಾದ. ಅವನದು ಸರ್ಪ ದೃಷ್ಟಿ. ತನಗೆ ಬೇಕಾದ ಕಾರ್ಡು ಇಳಿಸದೆ ಇದ್ದರೆ ರಾಮಸ್ವಾಮಿ ತಲೆ ಮೇಲೆ ತಕ್ಷಣ ಗೂಬೆ ಕೂರಿಸೇ ಬಿಡುವನು. "ಇಳಿಸೋ ಇದ್ನೇಯು!" ಅಂತ ಕೂಗೇ ಬಿಡುವನು. ಆಗಾಗ ಕಿಟಕಿಯ ಹತ್ರ ಹೋಗಿ ಮೂಗು ಖಾಲಿ ಮಾಡುವನು. ರಾಮಸ್ವಾಮಿಗೆ ಬೈಗಳು ಬಿದ್ದಾಗೆಲ್ಲ, "ನೋಡಮ್ಮ! ನಿನ್ನ ಗಂಡನ ಗತೀನ" ಅಂತ ಕುಮಾರಯ್ಯನವರು ಗೇಲಿ ಮಾಡುವರು.

* * *

ನಡುವೆ ಒಂದು ಅನಾಹುತ! ಇಸ್ಪೀಟಿನ ಅವಾಂತರದಲ್ಲಿ ರೈಲು ನಿಂತಿದ್ದು, ಹೊರಟಿದ್ದು, ನಿಧಾನಿಸಿದ್ದು, ಕಂಬಿ ಬದಲಾಯಿಸಿದ್ದು, ಯಾವುದರ ಅರಿವೂ ಗಂಡಸರಿಗಿಲ್ಲ. ಒಂದು ಜಂಕ್ಷನ್ ಬಂತು. ರೈಲು ಕೊಂಚ ಹೊತ್ತು ನಿಂತಿತು. ಪರಂಗಿ ಯುವರೊಬ್ಬರು ೧೪, ೧೫ ವರ್ಷದ ಹೆಣ್ಣು ಕೂಸೊಂದನ್ನು ಎಳೆದು ತರುತ್ತಾ, ಎಲ್ಲ ಕಿಟಕಿಗಳಿಂದಲೂ ಒಳಗೆ ಬಗ್ಗಿ ನೋಡಿದರು. "ಯಾವನೋ ರಾಸ್ಕಲ್ ನನ್ನ ಸೇದುತ್ತಿದಾನೆ. ನೋಡಿ. ನಮ್ಮ ಹುಡುಗಿ ಲಂಗ" ಅಂತ ರೇಗಾಡಿದರು. ರಾಮಸ್ವಾಮಿಗೆ ದುರಂತ ಪರಿಸ್ಥಿತಿ ಬಹಳ ಬೇಗ ಅರ್ಥವಾಯಿತು. ಅವನು ಬೆಂಚಿನ ಕೆಳಗೆ ಮಾಯವಾದ. ರೈಲು ಹೊರಟ ಮೇಲೆ ಅವನನ್ನ ಈಚೆಗೆ ಎಳೆದರು. ಆ ಮೇಲೆ ಅವನನ್ನ "ಪರಂಗಿ" "ಪರಂಗಿ" ಅಂತ ಉದ್ದಕ್ಕೂ ಹೆದರಿಸುತ್ತಿದ್ದರು.

* * *

ಆ ಗಲಾಟೆಯಲ್ಲಿ ಜಗ್ಗು ಚಿನ್ನಿ ಇಬ್ಬರೂ ಪಕ್ಕ ಪಕ್ಕ ಕುಳಿತು ಸರಸವಾಡುತ್ತಿದ್ದದ್ದನ್ನ ಯಾರೂ ಗಮನಿಸಲೇ ಇಲ್ಲ...ಮದುವೆ ಗಂಡು ಮಾತ್ರ ಅದನ್ನೇ ನೋಡುತ್ತಾ ಕನಸು ಕಾಣುತ್ತಿತ್ತು.

ವಕ್ರದೃಷ್ಟಿ

—ಅಮಲಕ

ಚೀನಾದ ಜನಸಂಖ್ಯೆ ಜಗತ್ತಿನ 20·/.ರಷ್ಟಿದೆ. ಇನ್ನು ಕೆಲವೇ ವರ್ಷಗಳಲ್ಲಿ ಭಾರತದ ಜನಸಂಖ್ಯೆ ಚೀನಾದ್ದನ್ನು ಮೀರುತ್ತದೆ.

—ಸುದ್ದಿ

ಕೊನೆ ಪಕ್ಷ though not in production we make name in reproduction.—ಏನಂತೀರಿ?

O O O O

ನಮ್ಮ idlers parlour ಕಾಮೆಂಟು:—

"ಈ ಪಾಟೀ—ಯುದ್ಧಾ—ತದ್ದಾ—ಹೊತ್ತಲ್ಲದ ಹೊತ್ತಿನಲ್ಲಿ power cut ಆದರೆ ಇನ್ನೇನಾಗುತ್ತೆ ? . . ."

O O O O

ಕುಟುಂಬ ಕಲ್ಯಾಣ ಕಾರ್ಯಕ್ರಮಗಳಿಗ—ಸಮೂಹ ಮಾಧ್ಯಮಗಳ ಸದುಪಯೋಗ ಎಡಬಿಡದೇ ನಡೆದಾಗ್ಯೂ—

"ಕಾಯಕವೇ ಕೈಲಾಸ"ವೆಂಬ ನಮ್ಮ ಜನರ—ಧೈರ್ಯ—ಸ್ಥೈರ್ಯಗಳನ್ನು ಮೆಚ್ಚಲೇಬೇಕು.

O O O O

ದೇವೇಗೌಡರ "ನೀರಾವರಿ" ಕಾರಣದ ಕಾಲು ಕೀಟು (ರಾಜೀನಾಮೆ)—ಹೆಗಡೆಯವರಿಗೆ "ಗೌಡರೇ ನಿಮ್ಮ 'ನೀರೇ' (ability) ನಮಗೆ 'ವರಿ'ಯಾಗಿದೆ" ಎನ್ನುವಂತೆ ಮಾಡಿದೆ.

O O O O

ರಾಜಕೀಯ ಚದುರಂಗದಾಟದಲ್ಲಿ—ಚತುರ ಹೆಗಡೆಯವರು—"ಚೇರ್ ಮಲಾನಿ"ಪ್ಯಾದೇ ನಡೆನೆ—ಪ್ಯಾದೇ ಮತ್ ಮಾಡಿಸಿಕೊಂಡದ್ದು...ಕಾಲೇ ವಿಪರೀತ ಬುದ್ಧಿಯ ಸಂಕೇತವೋ ?!

O O O O

ಅಮಲಕನನ್ನು ಯಾರೋ ಕೇಳಿದರು "ಸ್ವಾಮಿ—ನೀವು ಹೆಗಡೆ ಪರವೋ—ಗೌಡರ ಪರವೋ ?"

ಹೆಗಡೆ—ಗೌಡರು—ಕೈಕುಲುಕುತ್ತಿರೋ ಚಿತ್ರವಿರುವ ಪೇಪರ್ನ ಕೈಲಿ ಹಿಡಿದ ಆಮಲಕ ಉತ್ತರಿಸಿದನಂತೆ

"ಸ್ವಾಮಿ—ಸದ್ಯಕ್ಕೆ ನಾನು ತಟಸ್ಥ"

O O O O

ಹಾಸನದಲ್ಲಿ ಕೋಟು ಬದಲಾಯಿಸಿದ್ದ ಸಚಿವರನ್ನ—ಹೆಗಡೆಯವರು ಹಳೇ ಕೋಟು ವಾಪಸ್ಸು ಕೇಳಿದಾಗ "ಛೇ—ಛೇ—ಅದೇ ಕೋಟನ್ನೇ ನಾನು ಯಾವಾಗಲೂ ಹಾಕೋದು. ಹಾಸನದಲ್ಲಿ ಕೋಟು ತಿರುಗಾ ಮುರುಗಾ ಆಗಿತ್ತು—ಬೆಂಗಳೂರಿಗೆ ಬಂದಾಗ ನೋಡಿಕೊಂಡೆ—ಈಗ ಸರಿಯಾಗಿ ಹಾಕಿಕೊಂಡಿದ್ದೇನೆ" —ಎಂದರಂತೆ.

O O O O

"ನಾನೂ ಅಷ್ಟೇ—ಆ ದಿನ—ನನ್ನ ಮನೇಲಿ ಜನ ಸೇರಿದ್ದಾಗ ವಿನು ಶಖೇ ಅಂತೀರಾ—ಅದಕ್ಕೆ ಕೋಟು ತೆಗೆದಿಟ್ಟಿದ್ದೆ ಅಷ್ಟೆ" —ಎಂದರಂತೆ ಇನ್ನೊಬ್ಬ ಸಚಿವರು.

O O O O

"ಚಂದ್ರಶೇಖರ_ಚಂದ್ರಶೇಖರ–ಚಂದ್ರಶೇಖರ ಪಾಹಿಮಾಂ... ಎಂದರಂತೆ ದೆಲ್ಲೀಲಿ ಕನ್ನಡದ ಕಲಿಗಳು.

ಸಂಗಬಿಟ್ಟಿದ್ದ ಹುಡುಗರ ಸಂಗ ಬಿಟ್ಟಿಸಿ—ಕೈ ಕುಲುಕಿಸಿದ ಚಂದ್ರಶೇಖರ್ ಅವರು

"ಉತ್ತರ ಧ್ರುವದಿಂ ದಕ್ಷಿಣ ಧ್ರುವಕೂ—ಚುಂಬಕ ಗಾಳಿಯು ಬೀಸುತಿದೆ" ಎಂದು ಹಾಡಿ

"ನೋಡಿ ದಕ್ಷಿಣದ ಮಕ್ಕಳೇ...ದಕ್ಷಿಣಕ್ಕೆ ಉತ್ತರ....ಉತ್ತರದಲ್ಲಿದೆ... ಚಂದ್ರಶೇಖರ...ಕೈಲಾಸ ಶಿಖರ ಇರೋದು ಉತ್ತರದಲ್ಲಿ...ಅರ್ಥವೇ ?" ಎಂದು ಮಾರ್ಮಿಕವಾಗಿ ಚಂದ್ರಶೇಖರ್ ಗಡ್ಡದ ಸಂದಿನಿಂದ ನಕ್ಕಾಗ—ಹೆಗಡೆಯವರು ಗಡ್ಡ ಕೆರೆದುಕೊಂಡರು ಎಂಬ ಸುದ್ದಿ—ಅಷ್ಟಟ ಸುಳ್ಳಂತೆ.

O O O O



"ಆಯ್ತು ಕಣೇ, ನಿಮ್ಮ ಮಹಿಳಾ ಸಮಾಜದ ವ್ಯವಹಾರಕ್ಕೂ ಜನತಾ ರಾಜಕೀಯಕ್ಕೂ ಏನೇನೂ ಸಂಬಂಧ ಇಲ್ಲ. ಈಗ್ಲಾದ್ರೂ ಊಟ ಹಾಕ್ತೀಯಾ ?"

ಹಾಸ್ಯ ಸಾಹಿತ್ಯಕ್ಕೆ ಪತ್ರಿಕೆಗಳ ಕೊಡುಗೆ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

—ಎಚ್ ಎಲ್. ಕೇಶವಮೂರ್ತಿ

ಕೊರವಂಜಿಯ ನಂತರ ಗಮನಿಸಬೇಕಾದ ಮತ್ತೊಂದು ಹಾಸ್ಯ ಪತ್ರಿಕೆ 'ವಿನೋದ' ಮೊದಲ ಸಂಚಿಕೆ ಹೊರಬಂದದ್ದು ಜನವರಿ 26,1951ರಂದು. ಅದರ ಸಂಪಾದಕರು ದೇಶಹಳ್ಳಿ ಜಿ. ನಾರಾಯಣ. ಸ್ವಾತಂತ್ರ್ಯ ಬಂದು ನಾಲ್ಕು ವರ್ಷಗಳೂ ಕಳೆದಿರಲಿಲ್ಲ. ಆಗಲೆ ಸ್ವಾತಂತ್ರ್ಯ ಪೂರ್ವದ ಉಜ್ವಲ ಗುಣಗಳು ಮರೆಯಾಗುತ್ತಿದ್ದುವು. ಅಸತ್ಯ, ಅಪ್ರಾಮಾಣಿಕತೆ, ಅಕ್ರಮಗಳು ಅವತರಿಸಿ ಕೊಂಡಿದ್ದುವು. ಪುಢಾರಿಗಳು ನೆಹರು ಶರಟು, ಗಾಂಧಿ ಟೋಪಿಯನ್ನು ಹಾಸ್ಯಾಸ್ಪದ ಗೊಳಿಸಿದ್ದರು. ಈ ತೊಡಿಗೆ ತೊಟ್ಟ ವಿನಾಯಕನೇ ವಿನೋದದ ಲಾಂಛನವಾದ. ಹಾಸ್ಯ ಪ್ರಚೋದನೆ ಇವರ ಪ್ರಮುಖ ಉದ್ದೇಶ.

1951ರಿಂದ ಇಲ್ಲಿಯವರೆವಿಗೆ ವಿನೋದ ಸುಮಾರು 5,300 ಲೇಖನ ಗಳನ್ನು ಪ್ರಕಟಿಸಿದೆ. ಅವುಗಳ ಪುಟ ಸಂಖ್ಯೆ ಸುಮಾರು 16,000. ಇವೆಲ್ಲವೂ ಉತ್ತಮ ಲೇಖನಗಳು ಎಂದೇನಲ್ಲ. ಆದರೆ ಗಮನಿಸಬೇಕಾದ ಅಂಶ ಅಂದರೆ, ಇವುಗಳಲ್ಲಿ ಮುಕ್ಕಾಲು ಭಾಗ ಜೊಳ್ಳು ಅಂತ ಭಾವಿಸಿ ತಳ್ಳಿ ಹಾಕಿದರೂ ಸುಮಾರು 4,000 ಪುಟಗಳ ಉತ್ತಮ ವಿನೋದ ಸಾಹಿತ್ಯಕ್ಕೆ ಖಾತರಿ. ಇದರ ಲೇಖಕರ ಬಳಗವೇ ಮುನ್ನೂರಕ್ಕೂ ಹೆಚ್ಚು. ಕೊರವಂಜಿಯ ಬಳಗದವರೆಲ್ಲರೂ ಇಲ್ಲಿ ಕೈ ಆಡಿಸಿದ್ದಾರೆ. ಹೊಸಬರಿಗೆ ಇಲ್ಲಿ ಸದಾ ಆದ್ಯತೆ. ಈ ಉತ್ತೇಜನದ ಫಲ ವಾಗಿ ಹಲವು ಮಹಿಳೆಯರೂ—ಸುನೀತಿ ಕೃಷ್ಣಸ್ವಾಮಿ, ಅನುಸೂಯ ಸಂಪತ್ ಎ. ಪಂಕಜ, ಪ್ರೇಮಾ ಭಟ್, ಮಂಗಳಾ ಸತ್ಯನ್, ಎಚ್. ಎಸ್. ಪಾರ್ವತಿ ಇತ್ಯಾದಿ—ವಿನೋದ ಸಾಹಿತ್ಯ ರಚನೆಯಲ್ಲಿ ಸಕ್ರಿಯವಾಗಿದ್ದಾರೆ. ಗಂಭೀರ ಸಾಹಿತ್ಯಕ್ಕೇ ಮೀಸಲಾಗಿದ್ದ ರಂ. ಶ್ರೀ. ಮುಗಳಿ, ಸಿದ್ದಯ್ಯ ಪುರಾಣಿಕ, ಸಿ. ಪಿ. ಕೆ., ಎಂ. ಚಿದಾನಂದಮೂರ್ತಿ, ಎಂ. ವಿ. ಸೀ., ಚೆನ್ನವೀರ ಕಣವಿ, ಎಲ್. ಎಸ್. ಶೇಷ ಗಿರಿರಾವ್ ಅಂತಹವರನ್ನೂ ಹಾಸ್ಯ ಸಾಹಿತ್ಯ ಸೃಷ್ಟಿ ಎಡೆಗೆ ಸೆಳೆದ ಅಯಸ್ಕಾಂತ ಶಕ್ತಿ ಜಿ. ನಾರಾಯಣ ಅವರದ್ದು. ಎಂ. ಎಸ್. ಸ್ವಾಮಿಯವರು ಮುವ್ವತ್ತಕ್ಕೂ ಹೆಚ್ಚು ವರ್ಷಗಳಿಂದ ಕುಡಿನೋಟ ಬರೆಯುತ್ತಿದ್ದಾರೆ.

ವಿನೋದದ ಕೆಲವು ಪ್ರಮುಖ ಸಾಧನೆಗಳಿವು.

1. 1966ರಲ್ಲಿ ಹಾಸ್ಯ ಸಾಹಿತ್ಯ ಮತ್ತು ವ್ಯಂಗ್ಯ ಚಿತ್ರಗಳ ಪ್ರದರ್ಶನವನ್ನು ವಿನೋದ ಏರ್ಪಡಿಸಿತ್ತು. ಅದರ ಅಧ್ಯಕ್ಷತೆ ರಾಶಿಯವರದ್ದು. ಪ್ರದರ್ಶನವನ್ನು ಮೆಚ್ಚಿದ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿದ್ದು—'ಕೊರವಂಜಿ ಅಕ್ಕ. ವಿನೋದ ತಮ್ಮ.

2. ಎರಡು ವ್ಯಂಗ್ಯ ಚಿತ್ರ ಸಂಕಲನಗಳನ್ನು—ವಿನೋದ ಲಹರಿ, 1956 ಮತ್ತು ವಿನೋದ ಚಿತ್ರಗಳು 1978—ಪ್ರಕಟಿಸಿದೆ.

3. ಆಕರ್ಷಕ ಮುಖ ಪುಟ, ಕೆಣಕುವ ವ್ಯಂಗ್ಯ ಚಿತ್ರ, ಹಾಗೂ ಇತರೆ ಹಾಸ್ಯ ಪ್ರಕಾರಗಳ ವಾರ್ಷಿಕ ಸಂಚಿಕೆಯನ್ನು ಮೊದಲಿನಿಂದಲೂ ತರುತ್ತಿದೆ. ಮೊದಲ ನಾಲ್ಕು ವರ್ಷ ಅದು ಜನವರಿ 26ರಂದು ಹೊರಬರುತ್ತಿತ್ತು. ನಂತರದ ವರ್ಷಗಳಲ್ಲಿ ಅದು ಆಗಸ್ಟ್ ಹದಿನೈದರಂದು ಪ್ರಕಟವಾಗುತ್ತಿದೆ.

4. ತನ್ನ ಮುವ್ವತ್ತೈದನೆ ಹುಟ್ಟು ಹಬ್ಬವನ್ನ ವಿನೋದ ಆಚರಿಸಿದ್ದೇ ವೈವಿಧ್ಯಮಯವಾಗಿ ಅವತ್ತು ಒಂದು ಹಾಸ್ಯ ಗೋಷ್ಠಿ. ನಾಡಿನ ನಗೆ ಬರಹಗಾರರನ್ನೆಲ್ಲ ಒಂದೆಡೆ ಸೇರಿಸುವ ಪ್ರಯತ್ನ ಇದು. ಸುಮಾರು ಆರವತ್ತು ಜನ ನಗೆ ಬರಹಗಾರರು ಈ ಗೋಷ್ಠಿಯಲ್ಲಿ ಮಾತನಾಡಿದರು.

ವಿನೋದ ಪ್ರಾರಂಭವಾದಾಗಿನ ಅದರ ಬೆಲೆ ಎರಡಾಣೆ. ನಂತರ 40, 50, 60 ಪೈಸೆಗಳಾಗಿ ಎಪ್ಪತ್ತೈದು ಪೈಸೆಗೆ ಬಂದು ಈಗ ಒಂದು ರೂಪಾಯಿಗೆ ನಿಂತಿದೆ. ಕಾಗದ, ಮುದ್ರಣ ಇವೆಲ್ಲದರ ಬೆಲೆ ಭರದಿಂದ ಮೇಲಕ್ಕೇರುತ್ತಿರುವ ಈ ದಿನಗಳಲ್ಲಿ ಇದು ಅತಿ ಕಡಿಮೆ ಬೆಲೆಯೇ. ಆದರೂ ಇದನ್ನ ಕೊಳ್ಳಲು ಕನ್ನಡಿಗರ ಜುಗ್ಗತನ. ಹೀಗಿದ್ದೂ ಲೇಖಕರಿಗೆ ಸಂಭಾವನೆ ನೀಡುತ್ತಾ, ಲಾಭ–ನಷ್ಟ ಇಲ್ಲದೆ ಪತ್ರಿಕೆ ನಡೆಯುತ್ತಿರುವುದೇ ಒಂದು ಪವಾಡ.

1947ರಲ್ಲಿ 'ಆನಂದ ಜ್ಯೋತಿ' ನಂತರ 'ವಿನೋದಿನಿ' 1977ರಲ್ಲಿ ನಗೆ–ಹೊಗೆ (ಕೃ.ನ. ಮೂರ್ತಿ, ಹಾಸನ) ಹಾಸ್ಯ ಪ್ರಧಾನ ಪತ್ರಿಕೆಗಳು ಹೊರಬಂದೊ. ಆದರೆ ಅವೆಲ್ಲ, ಪ್ರಮುಖವಾಗಿ ಲೇಖಕರ ಕೊರತೆಯಿಂದಾಗಿ ಅಕಾಲ ಮೃತ್ಯುವಿಗೀಡಾದೊ.

ಕೊರವಂಜಿಯನ್ನ ಪತ್ರಿಕಾ ನಷ್ಟಕರು ಕಾಡಿಗೆ ಕಳುಹಿಸಿದ ನಂತರ ಅದರ ಬಳಗದವರಿಗೆ ಏನೋ ಕಳೆದುಕೊಂಡಿದ್ದೇವೆ ಅನ್ನುವ ಭಾವನೆ ಕಾಡುತ್ತಿತ್ತು.

ಅಂತಹದ್ದೇ ಒಂದು ಪತ್ರಿಕೆಯನ್ನು ತರಬೇಕೆಂಬ ಉತ್ಕಟೇಚ್ಛೆ ಹಲವರಿಗಿತ್ತು. ರಾಶಿಯವರ ಮಗ ಶಿವಕುಮಾರ್ ಅವರಿಗೂ ಈ ಒತ್ತಾಸೆ ಇತ್ತು. ನುರಿತ ಹಾಸ್ಯ ಬರಹಗಾರ ಅರಾಸೆ ಅವರ ಮಾರ್ಗದರ್ಶನದಲ್ಲಿ, ಶಿವಕುಮಾರ್ ಅವರ ಸಂಪಾದಕತ್ವದಲ್ಲಿ 1983ರಲ್ಲಿ ಅಪರಂಜಿ ಹೊರಬಂತು. ಕೊರವಂಜಿ ಸವೆಸಿದ ಹಾದಿಯಲ್ಲೇ ಹೆಜ್ಜೆ ಇಡುತ್ತಿರುವ ಈಕೆಯೂ ಬರಹಗಾರರ ಬಳಗಕ್ಕೆ, ಕನ್ನಡಿಗರ ಪ್ರೋತ್ಸಾಹಕ್ಕೆ ಕಾಯುತ್ತಿದ್ದಾಳೆ.

ಕನ್ನಡದಲ್ಲಿ ಹಲವು ವಾರಪತ್ರಿಕೆಗಳಿವೆ. ಹಾಸ್ಯ ಸಾಹಿತ್ಯದ ದೃಷ್ಟಿಯಿಂದ 'ಸುಧಾ' ಗಮನಾರ್ಹ. ಇದು ಪ್ರಾರಂಭ ಆದದ್ದು 1965ರಲ್ಲಿ. ಪ್ರಾರಂಭ ದಿಂದಲೂ, ತನ್ನೆಲ್ಲ ಸಂಚಿಕೆಗಳಲ್ಲೂ ಹಾಸ್ಯ ಪ್ರಧಾನ ಬರಹಗಳಿಗೆ ಉತ್ತೇಜನ ನೀಡುತ್ತಿದೆ. ಕಳೆದ ನಾಲ್ಕು ವರ್ಷಗಳಿಂದ ತನ್ನ ಎಲ್ಲ ಯುಗಾದಿ ವಾರ್ಷಿಕ ಸಂಚಿಕೆಗಳನ್ನೂ ಹಾಸ್ಯಕ್ಕೇ ಮೀಸಲಾಗಿಟ್ಟಿರುವುದು ಇದರ ವೈಶಿಷ್ಟ್ಯ. ಈ ಸಂಚಿಕೆ ಯಲ್ಲಿ, ಬೇರೆ ದಿನಗಳಲ್ಲಿ ಗಂಭೀರವಾಗಿರುವ ಸ್ಥಿರ ಶೀರ್ಷಿಕೆಗಳಿಗೂ. ಹಾಸ್ಯದ ಲೇಪನ. 1986ರ ಯುಗಾದಿ ವಿಶೇಷಾಂಕದೊಡನೆ ಸುಧಾ ನೀಡಿದ ಉಚಿತ ಕೊಡುಗೆ–ರಾಜಶೇಖರನ ರಾಜಕೀಯ–ಹೇಮಾತನಯರ ಹಾಸ್ಯ ಪ್ರಧಾನ ಕಾದಂಬರಿ. ಕೊರವಂಜಿಯ ಜೊತೆಯೇ ಸತ್ತು ಹೋಗಿದ್ದ ಅಣಕುವಾಡುಗಳಿಗೆ ಜೀವ ಕೊಟ್ಟದ್ದು 1981ರ ಯುಗಾದಿಯ ವಿಶೇಷ ಸಂಚಿಕೆ.

'ಸುಧಾ' ಈ ರೀತಿಯ ಪ್ರೋತ್ಸಾಹ ನೀಡದಿದ್ದಲ್ಲಿ ಪ್ರಾಯಶಃ, ಹೊಸ ಪೀಳಿಗೆಯ ಹಾಸ್ಯ ಬರಹಗಾರರಾದ ಎಂ. ಪಿ. ಮನೋಹರ ಚಂದ್ರನ್, ಎಚ್. ಎಲ್. ಕೇಶವಮೂರ್ತಿ, ಎಂ. ಎಸ್. ನರಸಿಂಹ ಮೂರ್ತಿ, ಸಿ. ಕೆ. ಎನ್. ರಾಜ, ಹೇಮಾತನಯ, ಎಂ. ಕೆ. ಗೋಪಿನಾಥ್, ಲೀಲಾ ಮಿರ್ಲೆ ಮುಂತಾದವರು ಸಾಹಿತ್ಯ ಜಗತ್ತಿಗೆ ಪ್ರವೇಶಿಸಲೇ ಸಾಧ್ಯವಾಗುತ್ತಿರಲಿಲ್ಲ.

'ಸುಧಾ' ನಂತರ ಗಮನಿಸಬೇಕಾದ ಪತ್ರಿಕೆ ಕರ್ಮವೀರ. ಹಾಸ್ಯ ಸಾಹಿತ್ಯಕ್ಕೆ ವಿಶೇಷ ಕೊಡುಗೆ ನೀಡಿದ ಕಾರಣಕ್ಕಾಗಿ ಅಲ್ಲ. ಆಳವಾದ ವಿದ್ವತ್ತಿದ್ದು, ಸಮಾಜ ವನ್ನು ಕೊಂಕು ದೃಷ್ಟಿಯಿಂದ ನೋಡುವ ಲಾಂಗೂಲಾಚಾರ್ಯರ (ಪಾಡಿಗಾರು ವೆಂಕಟರಮಣಸ್ವಾಮಿ)ನ್ನು ಪರಿಚಯಿಸಿದ್ದಕ್ಕಾಗಿ. ಕರ್ಮವೀರ 7–8–1950 ರಂದು ಓದುಗರೊಡನೆ ಹರಟೆ ಎಂಬ ಸ್ಥಿರ ಶೀರ್ಷಿಕೆಯನ್ನು ಪ್ರಾರಂಭಿಸಿತು. ಲಾಂಗೂಲಾಚಾರ್ಯರು ಅಲ್ಲಿ ಪ್ರಾರಂಭಿಸಿದ ವ್ಯಂಗ್ಯ ಲೇಖನಗಳ ಮಾಲೆಯನ್ನು ಹಲ ವಾರು ಪತ್ರಿಕೆಗಳಲ್ಲಿ ಮುಂದುವರೆಸಿದರು. ಇವರ ಲೇಖನಗಳ ವೈಶಿಷ್ಟ್ಯವೆಂದರೆ ಅವರು ಯಾರನ್ನು ವ್ಯಂಗ್ಯಕ್ಕೆ ಗುರಿಮಾಡುತ್ತಾರೋ ಅವರೂ ಕೂಡ ಕುಪಿತರಾಗು

ವೃದಲ್ಲಿ. ಹೀಗಾದರೆ ಇವರು ಅವರನ್ನು ನೋಡಿ ನಗುವುದರೊಂದಿಗೆ ತಮ್ಮನ್ನು ನೋಡಿಕೊಂಡೂ ನಗುತ್ತಾರೆ.

ಇಂಥದ್ದೇ ಕಾರಣಕ್ಕಾಗಿ ಹೆಸರಿಸಬೇಕಾದ ಮತ್ತೊಂದು ವಾರಪತ್ರಿಕೆ ಸ್ವದೇಶಾಭಿಮಾನಿ. ಅದರಲ್ಲಿ ಕಾರಂತರ 'ಮೈಲಿಕಲ್ಲಿನೊಡನೆ ಮಾತುಕತೆಗಳು, ಮತ್ತು 'ಹಳ್ಳಿಯ ಹತ್ತು ಸಮಸ್ತರು' ಪ್ರಬಂಧಗಳು ಮೊದಲು ಪ್ರಕಟವಾದದ್ದು ಇಲ್ಲಿ. ಕಾರಂತರು ಮೂಲಭೂತವಾಗಿ ಗಂಭೀರ ಲೇಖಕರಾದರೂ ಈ ಪ್ರಬಂಧಗಳಲ್ಲಿ ಹಾಸ್ಯದ ಹೊನಲು ಹರಿದಿದೆ.

ಮೊದಲು ನಾನಾದೆ ಒಬ್ಬ ಋಷಿಗಾಗಿ
ಆ ಬಳಿಕ ನೆರವಾದೆ ಕೃಷಿಗಾಗಿ
ಈಗಿರುವೆ ನೋಡಯ್ಯಾ ಒರಿಯ ಮಸಿಗಾಗಿ

ಕೆರೆ ಹೇಳುವ ಈ ಮಾತಿನಲ್ಲಿ ನಾರಾಯಣ ಅಣ್ಣನಂಥ ಕಾರುಬಾರಿಯೂ ಅಲ್ಲ; ಮಾತುಬಾರಿಯೂ ಅಲ್ಲ' ಅನ್ನುವುದರಲ್ಲಿ, 'ಐತಾಳರ ರೂಪ ನೋಡಬೇಕಾದದ್ದು. ತೆಳ್ಳಗಿನ ಶರೀರ: ಮಾಂಸವೇ ಇಲ್ಲ; ಎಲುಬೇ ಎಲ್ಲ–ಎನ್ನುವ ಜಾತಿ' ತರಹದ ಜಾಣ ಮಾತುಗಳಲ್ಲಿ ಕಾರಂತ ಹಾಸ್ಯ ಪ್ರಜ್ಞೆ ಕಾಣಬಹುದು.

'ತರಂಗ' ವಾರಪತ್ರಿಕೆ ತನ್ನ 1985ರ ಯುಗಾದಿ ವಿಶೇಷಾಂಕವನ್ನು ವ್ಯಂಗ್ಯ ಚಿತ್ರಗಳಿಗೇ ಮೀಸಲಾಗಿಟ್ಟು, ವ್ಯಂಗ್ಯ ಚಿತ್ರಗಳ ಹುಟ್ಟು, ಬೆಳವಣಿಗೆ ಇವುಗಳ ಸಂಪೂರ್ಣ ಮಾಹಿತಿ ನೀಡಿರುವುದನ್ನು ಇಲ್ಲಿ ಸ್ಮರಿಸಬೇಕು. ಗಮನಿಸಬೇಕಾದ ಮತ್ತೊಂದು ಪತ್ರಿಕೆ 'ಕಿಡಿ' ಇದು ಪ್ರಮುಖವಾಗಿ ರಾಜಕೀಯ ಪತ್ರಿಕೆ. ಪ್ರಖ್ಯಾತ ವ್ಯಂಗ್ಯ ಚಿತ್ರಕಾರ ರಾಮ ಮೂರ್ತಿಯವರನ್ನ ತಿದ್ದಿ, ಬೆಳೆಸಿದವರು ಈ ಪತ್ರಿಕೆಯ ಶೇಷಪ್ಪ. ರಾಮ ಮೂರ್ತಿಯವರೇ ಒಂದೆಡೆ ಹೇಳುತ್ತಾರೆ: "ನಾನಿನ್ನೂ ಆಗ ವಿದ್ಯಾರ್ಥಿ ಕಿಡಿ ಶೇಷಪ್ಪ ನನ್ನನ್ನು ಅಠಾರ ಕಛೇರಿಗೆ ಕರೆದುಕೊಂಡು ಹೋಗ್ತಿದ್ರು. ಆಗ ಅಲ್ಲಿ ವಿಧಾನ ಸಭೆ ಸೇರ್ತಿತ್ತು (1952–53). ಅಲ್ಲಿ ಹನುಮಂತಯ್ಯ ಮತ್ತು ಇತರರ ಚಿತ್ರ ಬರೆದುಕೊಳ್ಳಲು ಹೇಳುತ್ತಿದ್ದರು ಅವರು ಪ್ರಖ್ಯಾತ ವ್ಯಂಗ್ಯ ಚಿತ್ರಕಾರ ಡೇವಿಡ್‌ಲೊ ಅವರ ವ್ಯಂಗ್ಯ ಚಿತ್ರಗಳ ಸಂಕಲನ 'ಪೊಲಿಟಿಕಲ್ ಪೆರೇಡ್' ಕೊಟ್ರು. ಅದನ್ನ ಅಭ್ಯಸಿಸಿ ಚಿತ್ರ ಬರೆಯುವಂತೆ ಹೇಳಿದ್ರು

ಪ್ರಮುಖವಾಗಿ ರಾಜಕೀಯ ಪತ್ರಿಕೆಯಾದರೂ ಈ ನಾಡಿನ ಸಾಂಸ್ಕೃತಿಕ ಬದುಕಿಗೆ ಸ್ಪಂದಿಸುವ 'ಲಂಕೇಶ್ ಪತ್ರಿಕೆ' ಗಮನಿಸಬೇಕಾದ್ದು ಅನಿವಾರ್ಯ.

ಇದರಲ್ಲಿ ರಾಜಕೀಯ ವಿಡಂಬನಕಾರ ಪುಂಡಲೀಕ ಶೇಟ್ ಅವರ 'ಹುಬ್ಬಳ್ಳಿಯಾಂವ' ಸ್ಥಿರ ಶೀರ್ಷಿಕೆ ವ್ಯಂಗ್ಯ, ಹಾಸ್ಯದ ಗಣಿ. ಇಲ್ಲಿ ರಾಜ್ಯದ ಆಗು ಹೋಗುಗಳನ್ನ ಹುಬ್ಬಳ್ಳಿ–ಧಾರವಾಡದ ಭಾಷೆಯಲ್ಲಿ ಗೇಲಿ ಮಾಡಿ, ಕೊನೆಗೆ ಒಂದು ಪುಂಡಲೀಕ ವಚನ ನೀಡುತ್ತಾರೆ. ಇದಂತೂ ಹಾಸ್ಯ ಸಾಹಿತ್ಯಕ್ಕೆ ಉತ್ತಮ ಕಾಣಿಕೆ. ಈ ಪತ್ರಿಕೆಯ ಇನ್ನೆರಡು ಪ್ರಮುಖ ಸ್ಥಿರ ಶೀರ್ಷಿಕೆಗಳು 'ಕಣ್ಣಾಮುಚ್ಚಾಲೆ' ಮತ್ತು ಕಳೆದ ವರ್ಷ ತಾನೆ ಪ್ರಾರಂಭವಾದ 'ಛೆ ! ಛೆ !' ರಾಜಕೀಯ, ಸಾಮಾಜಿಕ ಆಗುಹೋಗುಗಳಿಗೆ, ಸಮಕಾಲೀನ ಬದುಕಿಗೆ ಸ್ಪಂದಿಸುವ ಸಂಪಾದಕ ಲಂಕೇಶ್ ಅವರ ಕಾಲಂ ಇವು. ಕಣ್ಣಾಮುಚ್ಚಾಲೆಯ ಪ್ರಶ್ನೆಗಳಿಗೆ ಲಂಕೇಶರ ಕಚಗುಳಿ ಇಡುವ ಉತ್ತರ ಮನಸ್ಸಿಗೆ ಮುದ ನೀಡುತ್ತದೆ. ಛೆ ! ಛೆ ! ಯಲ್ಲಿ ಲೇಖನದ ತೀಕ್ಷ್ಣತೆಗೆ ಗುರಿಯಾಗುವವರು ದಿಲ್ಲಿಯಿಂದ ಗಲ್ಲಿಯವರೆಗೂ ಇದ್ದಾರೆ. ತೀವ್ರ ವಾದ ವ್ಯಂಗ್ಯ ಇದರ ಗುರಿ.

'ಲಂಕೇಶ್ ಪತ್ರಿಕೆ' ಮಡಿವಂತರು ಮೂಗು ಮುರಿಯುವ 'ತುಂಟಾಟ' ಎಂಬ ಸ್ಥಿರ ಶೀರ್ಷಿಕೆ ಪ್ರಾರಂಭಿಸಿತು. ಇಲ್ಲಿನ ಜೋಕುಗಳೆಲ್ಲ ಲೈಂಗಿಕತೆಗೆ ಸಂಬಂಧಿಸಿದುವು. ಇಂತಹವು ಈ ಹಿಂದೆ 'ಪ್ರಜಾಪ್ರಭುತ್ವ' ವಾರಪತ್ರಿಕೆಯಲ್ಲಿ 'ಥೂ! ಹಲ್ಕಾ!!' ಶೀರ್ಷಿಕೆಯ ಅಡಿ ಪ್ರಕಟವಾಗುತ್ತಿದ್ದೊ. ಈ ಶೀರ್ಷಿಕೆ ನೀಡಲು ಕಾರಣ—ಇಂಗ್ಲೀಷಿನಲ್ಲಿ ಇಂತಹವೇ ಜೋಕುಗಳನ್ನು ಓದಿ ಖುಷಿ ಪಡುವ ಜನ, ಕನ್ನಡದಲ್ಲಿ ಇವು ಬಂದಾಗ ಥೂ... ಹಲ್ಕಾ... ಅಂತ ಮೂಗು ಮುರಿದದ್ದು. ಶೀಲ, ಅಶ್ಲೀಲಗಳ ನಡುವಣ ಗೆರೆ ಬಹಳ ಸೂಕ್ಷ್ಮ. ಇದು ಓದುಗರ ಮನೋಗುಣ ಅವಲಂಬಿಸಿರುತ್ತೆ. ಆದರೆ ಒಂದು ಮಾತ್ರ ಸತ್ಯ. ಅಶ್ಲೀಲ ಎನ್ನುವವರೂ ಇಂತಹ ಜೋಕುಗಳನ್ನು ಕದ್ದು ಓದಿ ಜೊಲ್ಲು ಸುರಿಸುತ್ತಾರೆ; ಮನಸ್ಸಿನಲ್ಲೇ ಮಂಡಿಗೆ ತಿನ್ನುತ್ತಾರೆ. ಯಾಕೆಂದರೆ ಲಂಕೇಶ್ ಪತ್ರಿಕೆ 'ತುಂಟಾಟ' ನಿಲ್ಲಿಸ ಬೇಕೆಂದು ಒಮ್ಮೆ ತೀರ್ಮಾನಿಸಿದಾಗ 'ಬೇಡಿ, ಇದು ಮುಂದುವರೀಲಿ' ಅನ್ನುವ ಪತ್ರಗಳ ಹೊಳೇನೇ ಪತ್ರಿಕಾ ಕಛೇರಿಗೆ ಹರೀತು.

ದಿನಪತ್ರಿಕೆಗಳಲ್ಲಿ ಪ್ರಜಾವಾಣಿ ಕನ್ನಡದ ಬದುಕಿಗೆ ಹತ್ತಿರವಾದದ್ದು. ಬಿ. ಪುಟ್ಟಸ್ವಾಮಯ್ಯ ಅದರ ಪ್ರಥಮ ಸಂಪಾದಕರು. ಆಗ ಅದರ ಪ್ರಸಾರ ಸಂಖ್ಯೆ ಕೇವಲ 4000. 1950ರಲ್ಲಿ ಟಿ. ಎಸ್. ರಾಮಚಂದ್ರರಾವ್ ಅದರ ಸಂಪಾದಕರಾದರು. ಸಮಾನತೆಯಲ್ಲಿ ನಂಬಿಕೆಯಿದ್ದ ಇವರು ತಮ್ಮ ಸಹೋದ್ಯೋಗಿ ಗಳನ್ನ ಸ್ನೇಹಿತರಂತೆ ಕಾಣುತ್ತಾ ಪತ್ರಿಕೆಯನ್ನು ಜನರ ಬಳಿಗೆ ತರಲು, ಜನರ ಪತ್ರಿಕೆಯನ್ನಾಗಿ ರೂಪಿಸಲು ಶ್ರಮಿಸಿದರು. ಇದೆಲ್ಲದರ ಪರಿಣಾಮ 1977ನೇ ಏಪ್ರಿಲ್ 11ರಂದು ಅವರು ತಮ್ಮ ಹುದ್ದೆಯಿಂದ ವಿಶ್ರಾಂತಿ ಪಡೆಯುವ ವೇಳೆಗೆ

ಪತ್ರಿಕೆಯು ಪ್ರಸಾರ ಸಂಖ್ಯೆ ಒಂದೂವರೆ ಲಕ್ಷದಷ್ಟಾಗಿತ್ತು. ಸ್ವಭಾವತಃ ಹಾಸ್ಯ ಪ್ರವೃತ್ತಿಯವರಾದ ಟಿ. ಎಸ್. ಆರ್. 'ಛೂಬಾಣ' ಸ್ಥಿರ ಶೀರ್ಷಿಕೆ ಪ್ರಾರಂಭಿಸಿದರು. ಅದು ಡಂಭಾಚಾರದ ಪ್ರಥಾರಿಗಳಿಗೆ, ಆಶಾಢಭೂತಿಗಳಿಗೆ, ಸಮಾಜಕಂಟಕರಿಗೆ ಬಾಣವೇ ಆಗಿದ್ದರೂ, ಉದ್ದೇಶ ಮಾತ್ರ ಚುಚ್ಚು ಮದ್ದಿನ ದಾಗಿತ್ತು. ಅಲ್ಲಿನ ಅವರ ಸೃಷ್ಟಿ 'ಘ' ಅನ್ಯಾಯವೆಲ್ಲದರ ಪ್ರತೀಕ. ವಿಶೇಷ ಸಂದರ್ಭಗಳಲ್ಲಿ 'ಛೂ ಬಾಣ' 'ಹೂ ಬಾಣ' ಆಗುತ್ತಿತ್ತು. ಈ ಕಾಲಂಗಳಲ್ಲಿ ಟಿಎಸ್ಸಾರ್ ಜನರಿಗೆ ವ್ಯಂಗ್ಯ, ಹಾಸ್ಯದ ತಿನಿಸನ್ನ ಉಣಬಡಿಸುತ್ತಿದ್ದರು. ದಿನ ಪತ್ರಿಕೆಗಳಲ್ಲಿ ವ್ಯಂಗ್ಯ ಚಿತ್ರಗಳ ಕೊರತೆ ಇತ್ತು. ಚಿನಕುರಳಿ ಪ್ರಾರಂಭಿಸಿದರು. ಅದರ ಅಡಿ ಪುಬ್ಬೀಕರ್ ಅವರಿಂದ ವ್ಯಂಗ್ಯ ಚಿತ್ರ ಬರೆಸಿ ಪ್ರತಿದಿನ ಛಾಪಿಸಿದರು. ವ್ಯಂಗ್ಯ ಚಿತ್ರಗಳಿಲ್ಲ ಎಂಬ ಅಪವಾದ ತೆಗೆದ ಮೊದಲ ಕನ್ನಡ ದಿನಪತ್ರಿಕೆ ಪ್ರಜಾ ವಾಣಿ ಆಯ್ತು.

ಪ್ರಜಾವಾಣಿಯ ವಿಶೇಷ ಅದರ ದೀಪಾವಳಿ ವಿಶೇಷಾಂಕ. ಇವರ ವಿಶೇಷ ಆಕರ್ಷಣೆ ಚುಟುಕಗಳು.

'ನಾನು BILIGIRI
ಈಶ್ವರನಿಗೆ ಮೂರು ಐ, ನನಗೆ ನಾಲ್ಕೈ

ಎಂದ ಬಿಳಿಗಿರಿಯವರಿಂದ ಹಿಡಿದು.

ಸಿಕ್ಕಿತು ! ಸಿಕ್ಕಿತು !
ಆತ್ಮವು ಸಿಕ್ಕಿತು
ಕಿಟ್ಟೆಲ್ ಕೋಶದ ನೂರಾ ಐವತ್
ಮೂರನೆ ಪುಟದಲ್ಲಿ
ಹರಿ ಓಂ ಹರ ! ಹರಿ ಹರ ಜಹತ್
ಆತ್ಮವು ಇನ್ನೆಲ್ಲಿ ?
ಹಳಬರು ಹೇಳಿದ
ಆತ್ಮವು ಇನ್ನೆಲ್ಲಿ

ಎಂದು ಪ್ರಶ್ನಿಸಿದ.

"ಜಗದ ಹೆಂಗಳೆನೆಲ್ಲಿ ತಾಯಂತೆ ಕಾಣುವುದು
ತಿಳಿಯಿತೇ ನಿನಗೆ ಮಗುವೆ ?"

"ಲೇಸು. ತುಸು ತಡೆ ಗುರುವೆ ಮನದಿ ಸಂಶಯವಿಹುದು
ತಂದೆಯನ್ನು ಕೇಳಿಬರುವೆ"


ಎಂಬ ಕಿಚಾಯಿಸದ ವಿ. ಜಿ. ಭಟ್ಟರ ಕವನಗಳು, ದಿನಕರ ದೇಸಾಯಿ, ಎಂ. ಅಕಬರ ಅಲಿ ಇತ್ಯಾದಿಯವರ ಚುಟುಕಗಳಿಗೆ ಅದರ ವ್ಯಾಪ್ತಿ ಇದೆ.

ಇತ್ತೀಚಿಗೆ ಪ್ರಜಾವಾಣಿ ಪತ್ರಿಕೆ, ಮಂಗಳವಾರ, ಭಾನುವಾರ ಹೊರತು ಮಿಕ್ಕೆಲ್ಲ ದಿನಗಳಲ್ಲೂ ತನ್ನ ಸಂಪಾದಕೀಯ ಪುಟದಲ್ಲಿ ಒಂದು ಹಾಸ್ಯ ಲೇಖನ ಪ್ರಕಟಿಸುತ್ತಿದೆ. ಅಲ್ಲದೆ ಸಾಪ್ತಾಹಿಕ ಪುರವಣಿಯ ಎರಡನೇ ಪುಟ. ಕಥೆ, ವಿಡಂಬನೆ, ಕಾವ್ಯಕ್ಕೆ ಮೀಸಲು.

ಉದಯವಾಣಿ ದಿನಪತ್ರಿಕೆ ತನ್ನ 1975ನೇ ದೀಪಾವಳಿ ಸಂಚಿಕೆಯಲ್ಲಿ 'ಕನ್ನಡ ಹಾಸ್ಯದ ಲಘು ಸಮೀಕ್ಷೆ'ಯನ್ನು ಅರಾಸೇ ಅವರಿಂದ ಮಾಡಿಸಿತು. ನಂತರ 1979ರಲ್ಲಿ ಹಾಸ್ಯ ಲೇಖನ ಸ್ಪರ್ಧೆ ಏರ್ಪಡಿಸಿತು.

ಕನ್ನಡ ಸಾಹಿತ್ಯದಲ್ಲಿ ಹಾಸ್ಯ ಬೀChi ಇಲ್ಲದೆ ಅಪರಿಪೂರ್ಣ. ಅದಕ್ಕಾಗಿ ವಿಶಾಲ ಕರ್ಣಾಟಕ ನೆನಸಬೇಕು. ತಿಂಮ ಜನ್ಮತಾಳಿದ್ದು ಇಲ್ಲಿ. ಬೀChi ಇಂಗ್ಲಿಷ್ ಓದುತ್ತಿದ್ದರು, ಕನ್ನಡದಲ್ಲಿ ಬರೆಯುತ್ತಿದ್ದರು. ಆಗ ಅವರಿಗೆದುರಾದವ ಓಡ್‌ಹೌಸ್‌ನ 'ಜೀವ್ಸ್ ಎಂಬ ವಿಚಿತ್ರ ಪ್ರಾಣಿ. ಇಂತಹ ಪ್ರಚಂಡ ಕನ್ನಡದಲ್ಲಿ ಕಾಣುತ್ತಿಲ್ಲವಲ್ಲ ಎಂಬ ಪೇಚಾಟ ಬೀಚಿಗೆ. ಚಿಂತೆಗೆ ರೂಪು ಕೊಟ್ಟಿದ್ದು ಪೋತೆನ್ ಜೋಸೆಫ್. ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಆಗ ಬರೆಯುತ್ತಿದ್ದ ಓವರ್ ಎ ಕಪ್ ಆಫ್ ಟೀ, ಈ ಜೀವ್ಸ್‌ನಿಗೆ ಜೋಸೆಫ್‌ರ ಉಡಿಗೆ ತೊಡಿಸಿದರು ಬೀChi. ತಿಂಮ ಸೃಷ್ಟಿಯಾದ. ಆಡಿಸಲು ರಂಗಸ್ಥಳ ? ವಿಶಾಲ ಕರ್ನಾಟಕದ 'ಕೆನೆ ಮೊಸರು'

ಈ ಲೇಖನದಲ್ಲಿ ನನ್ನ ಅರಿವಿಗೆ ಬಂದ ಪತ್ರಿಕೆಗಳ ಕೊಡುಗೆಯನ್ನು ಮಾತ್ರ ಪ್ರಸ್ತಾಪಿಸಿದ್ದೇನೆ. ಇದು ಇದರ ಮಿತಿಯೂ ಹೌದು.



REGISTERED No. BGW-180

Printed by V. R. NATH for the Publisher M. SHIVA KUMAR. Published and owned by M. SHIVA KUMAR, 36, 6th Main Road, Malleswarm, Bangalore-560 003. Printed at IMPRESSIONS, 404, Sampige Road, Malleswaram, Bangalore-560 003. Eiditor : M. SHIVA KUMAR.